
18 ಆಗಸ್ಟ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 160 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತದ ಉದಯೋನ್ಮುಖ ತಾರೆ ಅನಾಹತ್ ಸಿಂಗ್ ಅವರು ಎನ್‌ಎಸ್‌ಡಬ್ಲ್ಯು ಬೇಗಾ ಓಪನ್ ಸ್ಕ್ವಾಷ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದ ವೇಳೆ ಗಾಯಗೊಂಡು ನಿವೃತ್ತಿ ಹೊಂದಿದರು.



ಕಲ್ಲು ಕುಳಿ ಒಂದು ಅಚ್ಚರಿ » 2


ಪ್ರಮಾಣ ಪತ್ರ ಸಲ್ಲಿಸಿ ಇಲ್ಲವೇ ದೇಶದ ಕ್ಷಮೆ ಕೇಳಿ » 3


ಮೂಲಸೌಲಭ್ಯದಿಂದ ವಂಚಿತ ಎಸ್‌ಬಿಎಂ ಕಾಲೋನಿ » 4


# ಮಳೆಯ ಅಬ್ಬರ : ತಲ್ಲಣಗೊಂಡ ಮಲೆನಾಡು

**ಹಲವೆಡೆ ಭೂ ಕುಸಿತ | ಪ್ರವಾಹ ಪರಿಸ್ಥಿತಿ | ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಕಡಿತ | ರಸ್ತೆಯಲ್ಲೇ ರಾತ್ರಿ ಕಳೆದ ವಾಹನ ಸವಾರರು**

• ಪ್ರಜೋದಯ ವರದಿ


**ಹಾಸನ :** ಪಶ್ಚಿಮಘಟ್ಟ ಸೇರಿ ಜಿಲ್ಲೆಯ ಮಲೆನಾಡು ಹಾಗು ಅರೆಮಲೆನಾಡು ಪ್ರದೇಶದಲ್ಲಿ ಕಳೆದ 3 ದಿನಗಳಿಂದ ನಿರಂತರ ಸುರಿಯುತ್ತಿರುವ ಮಳೆಯ ಪರಿಣಾಮ ಜನಜೀವನ ತತ್ತರ ಗೊಂಡಿದೆ. ಸಕಲೇಶಪುರ ತಾಲ್ಲೂಕಿನ ಬಿಸ್ಲೆಘಾಟ್ ಸೇರಿ ಹೆತ್ತೂರು, ಹಾನುಬಾಳ್, ಯಸಳೂರು ಹೋಬಳಿಯಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ಅನೇಕ ಕಡೆ ರಸ್ತೆ ಸಂಚಾರ ಬಂದ್ ಆಗಿದೆ.

ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆ ಸುರಿಯುವ ಅತ್ತಿಹಳ್ಳಿ, ಬಾಳೆಹಳ್ಳ, ಕಾಗಿನಹರೆ, ಕಾಡುಮನೆ ವ್ಯಾಪ್ತಿಯಲ್ಲಿ ಕಳೆದ ಮೂರು ದಿನಗಳಿಂದ ಸರಾಸರಿ 6 ಇಂಚು ಮಳೆಯಾಗುತ್ತಿದ್ದು, ಹಾನುಬಾಳ್, ಕಸಬಾ ಹೋಬಳಿ ಹಾಗು ಯಸಳೂರು ಭಾಗದಲ್ಲಿ 3 ರಿಂದ 4 ಇಂಚು ಮಳೆ ಬೀಳುತ್ತಿರುವು ದರಿಂದ ಈ ಭಾಗದಲ್ಲಿ ಹರಿಯುವ ಸಣ್ಣ ನದಿಗಳು, ಕಾಲುವೆಗಳು ಎಲ್ಲೆ ಮೀರಿ ಗದ್ದೆ ಬಯಲು, ರಸ್ತೆ ಮೇಲೆ ಹರಿಯುತ್ತಿರುವುದರಿಂದ ಸಂಚಾರಕ್ಕೆ ಸಮಸ್ಯೆ ಆಗಿದೆ. ವಿಪರೀತ ಗಾಳಿಯ ಹೊಡೆತದಿಂದಾಗಿ ಮರಗಳು ಉರುಳಿವೆ. ವಿದ್ಯುತ್ ಸಂಪರ್ಕ ಕಡಿತಗೊಂಡು ಜನರು ಪರಿತಪಿಸುವಂತಾಗಿದೆ.

ನಾಟಿ ಮಾಡಿದ ಭತ್ತದ ಗದ್ದೆಗಳು ಜಲಾವೃತಗೊಂಡು ಪೈರು ಹಾಳಾಗುವ ಹಂತ ತಲುಪಿದೆ. ಶನಿವಾರ ರಾತ್ರಿ ಕಡ್ರವಳ್ಳಿ, ಆಲುವಳ್ಳಿ ಭಾಗದಲ್ಲಿ ಎರಡು ಗಂಟೆಗಳ ಕಾಲ ವಿಪರೀತ ಮಳೆ ಬಿದ್ದ ಪರಿಣಾಮ ಗ್ರಾಮಗಳೇ ಜಲಾವೃತಗೊಂಡು ಅನಾಹುತ ಸಂಭವಿಸುವ ಪರಿಸ್ಥಿತಿ ನೆಲೆಗೊಂಡ ವರದಿ ಇದೆ.

ಮಳೆಯಿಂದಾಗಿ ಕ್ಯಾನಹಳ್ಳಿ, ಚಿನ್ನಹಳ್ಳಿ, ಕಡ್ರವಳ್ಳಿ, ಹಿರಿದನಹಳ್ಳಿ ರಸ್ತೆಗಳ ಬದಿಗಳಲ್ಲಿ ಗುಡ್ಡ ಕುಸಿದು ಸಂಚಾರಕ್ಕೆ ತಾತ್ಕಾಲಿಕ ನಿರ್ಬಂಧ ಹೇರಲಾಗಿದೆ. ಯಡಕೆರೆ ಹಳ್ಳ ತುಂಬಿ ಹರಿದು ಕುಂಬ್ರಹಳ್ಳಿ-ಯಡಕೆರೆ ರಸ್ತೆ ಬಂದ್ ಆಗಿದೆ. ರಾಷ್ಟ್ರೀಯ ಹೆದ್ದಾರಿ 75 ಶಿರಾಡಿಘಾಟ್‌ನಲ್ಲಿ ಶನಿವಾರ ಸಂಜೆ ಮೇಘಸ್ಫೋಟದಿಂದ ಎರಡು ಗಂಟೆಯಲ್ಲಿ 400 ಮಿ.ಮೀ ಮಳೆ ಸುರಿದು ಘಾಟ್ ರಸ್ತೆಯಲ್ಲಿ ಹೊಳೆಯಂತೆ ನೀರು ಹರಿಯಿತು.

ಮರ ಉರುಳಿ ಬಿದ್ದ ಹಾಗು ಗುಡ್ಡ ಕುಸಿತದಿಂದ ರಾತ್ರಿ ಮಂಗಳೂರು-ಬೆಂಗಳೂರು ವಾಹನ ಸಂಚಾರ ಸ್ಥಗಿತಗೊಂಡು ಸಾವಿರಾರು ವಾಹನಗಳು ರಸ್ತೆಯಲ್ಲಿ ಸಿಲುಕಿಕೊಂಡವು. ಅರಣ್ಯ ಹಾಗೂ ಹೆದ್ದಾರಿ ಇಲಾಖೆಯು ಜೆಸಿಬಿ ಬಳಸಿ ತೆರವು ಕಾರ್ಯಾಚರಣೆ ನಡೆಸಿದರೂ, ಭಾರೀ ಮಳೆಯ ಕಾರಣ ಮತ್ತೆ-ಮತ್ತೆ ಭೂಕುಸಿತ ಸಂಭವಿಸುತ್ತಿದ್ದು, ಅಪಾಯದ ಪರಿಸ್ಥಿತಿ ಮುಂದುವರಿದಿದೆ.





**ರೈಲು ಸಂಚಾರಕ್ಕೆ ಅಡ್ಡಿ**

ಸಕಲೇಶಪುರ-ಸುಬ್ರಹ್ಮಣ್ಯ ರೈಲು ಮಾರ್ಗದಲ್ಲಿ ಶನಿವಾರ ಸಂಜೆ 7 ಕಡೆ ಭೂಕುಸಿತ ಸಂಭವಿಸಿ ಸಂಚಾರ ಸ್ಥಗಿತಗೊಂಡಿತು. ಮೈಸೂರು ವಿಭಾಗದ ರೈಲ್ವೆ ಅಧಿಕಾರಿಗಳು ಕಾರ್ಮಿಕರೊಂದಿಗೆ ರಾತ್ರಿ ಪೂರ್ತಿ ಕಾರ್ಯಾಚರಣೆ ನಡೆಸಿ ಮುಂಜಾನೆ ಹಳಿಯ ಮೇಲೆ ಬಿದ್ದ ಮಣ್ಣು ಹಾಗು ಮರಗಳನ್ನು ತೆರವು ಗೊಳಿಸಿ ಸಂಚಾರ ಪುನರಾರಂಭ ಮಾಡಿದರು. ಮಂಗಳೂರಿನತ್ತ ತೆರಳಬೇಕಿದ್ದ 10 ಕ್ಕೂ ಹೆಚ್ಚು ರೈಲುಗಳನ್ನು ಮಾರ್ಗ ಬದಲಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಲಾಯಿತು.

ಭಾರೀ ಮಳೆಯಿಂದ ಸ್ಥಳೀಯರು ಮನೆಯಿಂದ ಹೊರಬರದ ಪರಿಸ್ಥಿತಿಯಲ್ಲಿದ್ದರೆ, ಪ್ರವಾಸಿಗರು ಮಳೆ ಮಧ್ಯೆ ಬೆಟ್ಟ-ಗುಡ್ಡ, ಜರಿತೊರೆಗಳಲ್ಲಿ ಫೋಟೋ ಕ್ಲಿಕ್ಕಿಸಿ ಸಂಭ್ರಮಿಸಿದರು. ವೀಕೆಂಡ್‌ನ ಹಿನ್ನೆಲೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಟ್ರಾಫಿಕ್ ಜಾಮ್ ಸಮಸ್ಯೆಯು ಮತ್ತಷ್ಟು ಬಿಗಡಾಯಿಸಿದೆ.

ತಾಲೂಕು ಆಡಳಿತ ತುರ್ತು ಸಹಾಯವಾಣಿ ಕೇಂದ್ರ ಆರಂಭಿಸಿದೆ. ವಿದ್ಯುತ್, ಅರಣ್ಯ, ಪೊಲೀಸ್ ಇಲಾಖೆ ಸಿಬ್ಬಂದಿ ನಿರಂತರ ತೆರವು ಹಾಗೂ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿದ್ದಾರೆ. ಒಟ್ಟಿನಲ್ಲಿ ತಾಲೂಕಿನಲ್ಲಿ ಸುರಿಯುತ್ತಿರುವ ಭಾರೀ ಮಳೆಯ ಅಟ್ಟಹಾಸ ಮುಂದುವರಿದಿದೆ.

### ಹೇಮಾವತಿ ಒಳ ಹರಿವು ಹೆಚ್ಚಳ

ಹಾಸನ : ಹೇಮಾವತಿ ನದಿ ಪಾತ್ರದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಟ್ಟಿಗೆಹಾರ ಸೇರಿ ಸಕಲೇಶಪುರ ತಾಲ್ಲೂಕಿನಲ್ಲಿ ವಿಪರೀತ ಮಳೆ ಸುರಿಯುತ್ತಿರುವುದರಿಂದ ಹೇಮಾವತಿ ಅಣೆಕಟ್ಟೆಯ ಒಳ ಹರಿವು ಭಾರೀ ಪ್ರಮಾಣದಲ್ಲಿ ಏರಿಕೆಯಾಗುವ ಸಾಧ್ಯತೆಗಳಿವೆ. ಈ ಬಾರಿ ಮುಂಗಾರು ಆರಂಭದಲ್ಲಿಯೇ ಉತ್ತಮ ಮಳೆ ಬಿದ್ದ ಕಾರಣ ತಿಂಗಳ ಹಿಂದೆಯೇ ಜಲಾಶಯ ಭರ್ತಿಯಾಗಿದೆ. ಹಾಗಾಗಿ ಹೆಚ್ಚುವರಿ ನೀರನ್ನು ನದಿಗೆ ಹರಿಸುವುದು ಅನಿವಾರ್ಯ. ಭಾನುವಾರ ಬೆಳಿಗ್ಗೆ ಜಲಾಶಯಕ್ಕೆ 11 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿತ್ತು. ಸೋಮವಾರದ ಹೊತ್ತಿಗೆ 20 ಸಾವಿರಕ್ಕೂ ಹೆಚ್ಚು ಕ್ಯೂಸೆಕ್ ಹರಿವು ದಾಖಲಾಗುವ ಅಂದಾಜಿದೆ.

### ಕಳೆದ ವರ್ಷಕ್ಕಿಂತ ಈ ಬಾರಿ ಅಧಿಕ ಮಳೆ

ಬಾಳೆಹಳ್ಳ-230 ಇಂಚು, ಅತ್ತಿಹಳ್ಳಿಯಲ್ಲಿ 222 ಇಂಚು ಮಳೆ

ಸಕಲೇಶಪುರ : ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಮಳೆ ಬೀಳುವ ಪಶ್ಚಿಮಘಟ್ಟಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ಈ ವರ್ಷ ಕಳೆದ ಸಾಲಿಗಿಂತ ಹೆಚ್ಚು ಮಳೆ ಸುರಿದಿದೆ.

ಭಾನುವಾರ ಬೆಳಿಗ್ಗೆ ತನಕದ ಲೆಕ್ಕಾಚಾರದ ಪ್ರಕಾರ ಅತ್ತಿಹಳ್ಳಿ ವ್ಯಾಪ್ತಿಯಲ್ಲಿ ಮುಂಗಾರು ಆರಂಭದ ನಂತರ ಈವರೆಗೆ 222 ಇಂಚು ಮಳೆ ಆಗಿದೆ. ಕಳೆದ ವರ್ಷ ಈ ವೇಳೆಗೆ ಆ ಭಾಗದಲ್ಲಿ 186 ಇಂಚು ಮಳೆ ಬಿದ್ದಿತ್ತು. ಬಾಳೆಹಳ್ಳದಲ್ಲಿ 230 ಇಂಚು ಮಳೆ ಸುರಿದಿದೆ. ಕಳೆದ ವರ್ಷ ಈ ಹೊತ್ತಿಗೆ 198 ಇಂಚು ಮಳೆ ಆಗಿತ್ತು. ಹೆತ್ತೂರಿನಲ್ಲಿ 150 ಇಂಚು ಮಳೆ ಬಿದ್ದಿದೆ. ಕಳೆದ ವರ್ಷ 145 ಇಂಚು ಮಳೆ ಆಗಿತ್ತು. ಉಚ್ಚಂಗಿಯಲ್ಲಿ 110 ಇಂಚು ಮಳೆಯಾದ ವರದಿ ಇದೆ. ಕಳೆದ ವರ್ಷ 29 ಇಂಚು ಮಳೆಯ ಪ್ರಮಾಣ ದಾಖಲಾಗಿತ್ತು.

ಮಲೆನಾಡು ಹಾಗು ಅರೆಮಲೆನಾಡು ಪ್ರದೇಶದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ 20 ರಿಂದ 25 ಇಂಚು ಹೆಚ್ಚು ಮಳೆಯಾಗಿದೆ.

## ಜಮ್ಮು-ಕಾಶ್ಮೀರದಲ್ಲಿ ಮೇಘ ಸ್ಫೋಟ: 7 ಜನರ ಸಾವು




• ಪ್ರಜೋದಯ ವರದಿ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯ ಜೋಡ್ ಘಾಟಿ ಎಂಬ ಗ್ರಾಮದಲ್ಲಿ ಭಾನುವಾರ ಸಂಭವಿಸಿದ ಮೇಘಸ್ಫೋಟದಲ್ಲಿ 7 ಜನರು ಮೃತಪಟ್ಟಿದ್ದಾರೆ.

ರಾತ್ರಿಯಿಡೀ ಭಾರೀ ಮಳೆಯಾಗಿದ್ದು, ಬೆಳಗಿನ ಜಾವ ಮೇಘ ಸ್ಫೋಟ ಸಂಭವಿಸಿದೆ. ಶನಿವಾರ ಮತ್ತು ಭಾನುವಾರ ಮಧ್ಯರಾತ್ರಿ ರಾಜ್‌ಬಾಗ್ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಏತನ್ಮಧ್ಯೆ ಕಥುವಾ ಪೊಲೀಸ್ ಠಾಣೆ ವ್ಯಾಪ್ತಿಯ ಬಗಾರ್ಡ್ ಮತ್ತು ಚಾಂಗ್ಡಾ ಗ್ರಾಮ, ಲಖನ್‌ಪುರದ ದಿಲ್ವಾನ್-ಹುಟ್ಲಿ ಪ್ರದೇಶದಲ್ಲಿ ಭೂಕುಸಿತಗಳು ವರದಿಯಾಗಿವೆ. ಭಾರೀ ಮಳೆಯಾಗುತ್ತಿರುವುದರಿಂದ ವಿವಿಧ ನದಿಗಳ ನೀರಿನ ಮಟ್ಟದಲ್ಲಿ ಗಮನಾರ್ಹ ಏರಿಕೆಯಾಗಿದೆ. ಮೇಘ ಸ್ಫೋಟ ಹಿನ್ನಲೆ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಪ್ರತಿಕ್ರಿಯಿಸಿ, ಘಟನೆ ಬಗ್ಗೆ ಮಾಹಿತಿ ಪಡೆದ ನಂತರ ಕಥುವಾ ಎಸ್‌ಪಿ ಶೋಭಿತ್ ಸಕ್ಸೇನಾ ಅವರೊಂದಿಗೆ ಮಾತನಾಡಿದೆ. ರೈಲ್ವೆ ಹಳಿ, ರಾಷ್ಟ್ರೀಯ ಹೆದ್ದಾರಿ ಮತ್ತು ಕಥುವಾ ಪೊಲೀಸ್ ಠಾಣೆಗೆ ಹಾನಿಯಾಗಿರುವುದು ತಿಳಿದು ಬಂದಿದೆ. ನಾಗರಿಕ ಆಡಳಿತ, ಮಿಲಿಟರಿ ಮತ್ತು ಅರೆಸೇನಾ ಪಡೆಗಳು ಕಾರ್ಯಾಚರಣೆಗೆ ಇಳಿದಿವೆ. ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದರು.

## ಉಪರಾಷ್ಟ್ರಪತಿ ಹುದ್ದೆಗೆ ರಾಧಾಕೃಷ್ಣನ್ ಎನ್‌ಡಿಎ ಅಭ್ಯರ್ಥಿ



• ಪ್ರಜೋದಯ ವರದಿ

**ನವದೆಹಲಿ:** ಉಪ ರಾಷ್ಟ್ರಪತಿ ಚುನಾವಣೆಗೆ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಕಣಕ್ಕಿಳಿಯಲಿದ್ದಾರೆ.

ಸಿ.ಪಿ.ರಾಧಾಕೃಷ್ಣನ್ ಕೊಯಮತ್ತೂರಿನಿಂದ ಎರಡು ಬಾರಿ ಸಂಸದರಾಗಿದ್ದರು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಅವರ ನಾಯಕತ್ವದಡಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. 1957ರ ಅಕ್ಟೋಬರ್ 20ರಂದು ತಮಿಳುನಾಡಿನ ತಿರುಪ್ಪೂರಿನಲ್ಲಿ ಜನಿಸಿದ ರಾಧಾಕೃಷ್ಣನ್ ಅವರು 1970ರ ದಶಕದಲ್ಲಿ ಆರ್‌ಎಸ್‌ಎಸ್‌ಗೆ ಸೇರಿದ್ದರು.

2023ರಲ್ಲಿ ಅವರನ್ನು ರಾಜ್ಯಪಾಲರನ್ನಾಗಿ ನೇಮಿಸಲಾಗಿತ್ತು. ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ಉಪರಾಷ್ಟ್ರಪತಿ ಸ್ಥಾನ ತೆರವಾಗಿದ್ದು, ಸೆ. 9ರಂದು ಚುನಾವಣೆ ನಿಗದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಎನ್‌ಡಿಎ ಅಭ್ಯರ್ಥಿ ಆಯ್ಕೆ ಮಾಡುವ ಅಧಿಕಾರ ನೀಡಲಾಗಿತ್ತು.

## ಭಾರೀ ಮಳೆ-ಗಾಳಿ : ಹಲವು ಮನೆಗಳಿಗೆ ಹಾನಿ

• ಪ್ರಜೋದಯ ವರದಿ

**ಸಕಲೇಶಪುರ :** ಮಳೆ ಹಾಗು ಗಾಳಿಯ ಒತ್ತಡದಿಂದಾಗಿ ತಾಲ್ಲೂಕಿನ ಹಲವು ಕಡೆಗಳಲ್ಲಿ ಮನೆಗಳು ಉರುಳುತ್ತಿವೆ. ತಾಲ್ಲೂಕಿನ ಗೊದ್ದು ಗ್ರಾಮದ ಹುದ್ರೆಮನೆಯ ಹೆಚ್.ಎಸ್.ಸಣ್ಣಪ್ಪಗೌಡ ಅವರ ಮನೆಯ ಮೇಲ್ಛಾವಣಿ ಕುಸಿದಿದೆ. ಮನೆಯಲ್ಲಿ ಯಾರು ಇಲ್ಲದ ಕಾರಣ ಅನಾಹುತ ಆಗಿಲ್ಲ.

ಪಟ್ಟಣದ ಬಾಳೆಗದ್ದೆಯ ಉಸ್ಮಾನ್ ಕುಟುಂಬದ ಮನೆ ಕುಸಿತಗೊಂಡಿದ್ದು, ಆನೆಮಹಲ್ ಶಾಲೆಯ ಕಾಂಪೌಂಡ್ ಗೋಡೆ ನೆಲಕ್ಕುರುಳಿದೆ. ಗಂಗಮ್ಮ, ಕೋಮಲೇಶ ಅವರ ಮನೆಗೂ ಹಾನಿಯಾಗಿದೆ. ಹೊಸೂರು ಗ್ರಾಮದಲ್ಲೂ ಕೆಲವು ಮನೆಗಳ ಗೋಡೆಗಳು ಬಿರುಕು ಬಿಟ್ಟ ವರದಿ ಇದೆ.





### ಇಂದು 3 ತಾಲ್ಲೂಕಿನ ಶಾಲೆಗಳಿಗೆ ರಜೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಹಿನ್ನಲೆಯಲ್ಲಿ ಆ.18ರಂದು ಸಕಲೇಶಪುರ, ಬೇಲೂರು ತಾಲ್ಲೂಕು ಹಾಗು ಆಲೂರಿನ ಕೆ.ಹೊಸಕೋಟೆ ಹೋಬಳಿ ಶಾಲೆಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಆದೇಶಿಸಿದ್ದಾರೆ.

ಮಲೆನಾಡಿನ ವಿವಿಧೆಡೆ ವ್ಯಾಪಕ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಜೆ ಘೋಷಿಸುವಂತೆ ಕೋರಿದ್ದರು. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಜಿಲ್ಲಾಧಿಕಾರಿ ಅವರು ಅಂಗನವಾಡಿ, ಪ್ರಾಥಮಿಕ ಹಾಗು ಪ್ರೌಢ ಶಾಲೆಗಳಿಗೆ ರಜೆ ಘೋಷಿಸಿದ್ದಾರೆ. ಈ ರಜೆ ಅವಧಿಗಳನ್ನು ಪ್ರಸಕ್ತ ಶೈಕ್ಷಣಿಕ ಅವಧಿಯ ರಜಾ ದಿನಗಳಲ್ಲಿ (ಶನಿವಾರ, ಭಾನುವಾರ) ಸರಿದೂಗಿಸುವಂತೆ ಅವರು ತಿಳಿಸಿದ್ದಾರೆ.

**ದಿಢೀರ್ ಕಾಫಿ ಬೆಲೆ ಏರಿಕೆ ತಂದ ಸಮಾಧಾನ**

## ಕಾಫಿ ಫಸಲು ಉಳಿಸಿಕೊಳ್ಳಲಾಗದ ಸ್ಥಿತಿಯಲ್ಲಿ ಬೆಳೆಗಾರ

• ಪ್ರಜೋದಯ ವರದಿ

**ಹಾಸನ :** ವಿಪರೀತ ಮಳೆಯ ಪರಿಣಾಮ ಕಾಫಿ ಫಸಲು ಭಾರೀ ಪ್ರಮಾಣದಲ್ಲಿ ಉದುರುತ್ತಿರುವು ದರಿಂದ ಬೆಳೆಗಾರರನ್ನು ಒಂದೆಡೆ ನಷ್ಟದ ಚಿಂತೆಗೆ ಈಡು ಮಾಡಿದ್ದರೆ, ಮತ್ತೊಂದು ಕಡೆ ಕಾಫಿ ಬೆಲೆ ಏರಿಕೆಯ ಹಾದಿ ಹಿಡಿದಿರುವುದು ತುಸು ಸಂತಸಕ್ಕೂ ನಾಂದಿಯಾಗಿದೆ.

ಮಲೆನಾಡು ಹಾಗು ಅರೆಮಲೆ ನಾಡಿನಲ್ಲಿ ಈ ಸಲ ಬಿಡುವು ಕೊಡದೆ ಮಳೆ ಸುರಿಯುತ್ತಿರುವುದರಿಂದ ತೋಟಗಳಲ್ಲಿ ಶೀತ ಹೆಚ್ಚಾಗಿ ಗಿಡಗಳು ನಿತ್ರಾಣಗೊಂಡು ಎಲೆ ಉದುರುವುದ ರೊಂದಿಗೆ ಕಾಫಿ ಕಾಯಿಗಳು ಭಾರೀ ಪ್ರಮಾಣದಲ್ಲಿ ನೆಲಕ್ಕೆ ಬೀಳುತ್ತಿರುವುದರಿಂದ ಹೆಚ್ಚು ಫಸಲು ನಿರೀಕ್ಷೆಯಲ್ಲಿದ್ದ ಬೆಳೆಗಾರರು ಕೈಗೆ ಬರುವ ಹಂತದಲ್ಲಿರುವ ಬೆಳೆಯನ್ನು ರಕ್ಷಿಸಿ ಕೊಳ್ಳಲಾಗದ ಅಸಹಾಯ ಸ್ಥಿತಿಯಲ್ಲಿದ್ದಾರೆ.

ಈ ಬಾರಿ ಕಾಫಿಗೆ ದಾಖಲೆಯ ಬೆಲೆ ದೊರಕಿದ ಕಾರಣ ಹಲವರು ತಮ್ಮ ಆರ್ಥಿಕ ವಹಿವಾಟು ಸರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಯಶಸ್ಸು ಕಂಡಿದ್ದರು. ಆದರೆ, ಕ್ರಮೇಣ ಕಳೆದ ಎರಡು ತಿಂಗಳಿನಿಂದಲೂ ಕಾಫಿ ಬೆಲೆಯಲ್ಲಿ ಕುಸಿತ ಆಗುತ್ತಲೇ ಇತ್ತು. 13ಸಾವಿರ ದಷ್ಟಿದ್ದ ರೊಬಸ್ಟಾ ಚೆರಿಯ ಬೆಲೆಯು ಚೀಲಕ್ಕೆ 8 ಸಾವಿರ ರೂ.ಗೆ ಕುಸಿತ ಕಂಡ ಕಾರಣ ಕಾಫಿ ದಾಸ್ತಾನು ಇಟ್ಟುಕೊಂಡ ಬೆಳೆಗಾರರು ಮತ್ತಷ್ಟು ನಷ್ಟ ಅನುಭವಿಸಬೇಕಾಗುತ್ತದೆ ಎಂಬ ಆತಂಕದಲ್ಲಿ ಕಳೆದ ಹದಿನೈದು ದಿನಗಳ ಅವಧಿಯಲ್ಲಿ ಚೀಲಕ್ಕೆ 8,000 ರೂ.ನಿಂದ 8,500 ರೂ.ಬೆಲೆಗೆ ವಿಲೇವಾರಿ ಮಾಡಿ ಕೈತೊಳೆದುಕೊಂಡರು.

ಆದರೆ, ಈಗ ರೊಬಸ್ಟಾ ಬೆಲೆಯು ಏರುತ್ತಾ ಚೀಲಕ್ಕೆ 11 ಸಾವಿರ ರೂ.ಗೆ ಬಂದು ನಿಂತಿದೆ. ರೊಬಸ್ಟಾ ಜೊತೆಗೆ ಚೀಲಕ್ಕೆ 18,000ಕ್ಕೆ ಇಳಿಕೆಯಾಗಿದ್ದ ಅರೇಬಿಕಾ ಪಾರ್ಚ್‌ಮೆಂಟ್ ಬೆಲೆಯು ಚೀಲಕ್ಕೆ 27 ಸಾವಿರ ರೂ.ಗೆ ಏರಿಕೆಯಾಗಿದೆ. ಈ ಹಿಂದೆ 29 ಸಾವಿರ ರೂ. ತನಕ ಬೆಲೆ ದೊರೆತ್ತಿತ್ತು.



### ಬ್ರೆಜಿಲ್‌ನಲ್ಲಿ ಹಿಮಪಾತ ಸಂಭವ

ಹಾಸನ : ಜಗತ್ತಿನಲ್ಲಿ ಅತೀ ಹೆಚ್ಚು ಕಾಫಿಯನ್ನು ಉತ್ಪಾದಿಸುವ ಬ್ರೆಜಿಲ್, ವಿಯೆಟ್ನಾಂನಲ್ಲಿ ಉತ್ಪಾದನೆಯಾಗುವ ಕಾಫಿಯ ಪ್ರಮಾಣವನ್ನು ಆಧರಿಸಿ ಭಾರತದ ಕಾಫಿಗೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ನಿಗದಿಯಾಗುವ ಕಾರಣ ಆ ದೇಶಗಳ ಉತ್ಪಾದನೆಯನ್ನೇ ಭಾರತದ ಕಾಫಿ ಬೆಲೆ ಅವಲಂಬಿಸುವಂತಾಗಿದೆ.

ಸದ್ಯದ ಮಾಹಿತಿಯ ಪ್ರಕಾರ ಬ್ರೆಜಿಲ್‌ನಲ್ಲಿ ಈ ಬಾರಿಯು ಹೆಚ್ಚು ಮಂಜು ಹಾಗು ಹಿಮಪಾತ ಬೀಳುವ ನಿರೀಕ್ಷೆಯನ್ನು ಅಲ್ಲಿಯ ಹವಾಮಾನ ಇಲಾಖೆ ವ್ಯಕ್ತಪಡಿಸಿದ್ದು, ಕಾಫಿಯ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದೆಂದು ಹೇಳಲಾಗುತ್ತಿದೆ. ಒಂದು ವೇಳೆ ಅದು ವಾಸ್ತವ ಆದಲ್ಲಿ ಭಾರತದ ಕಾಫಿಗೆ ಹೆಚ್ಚು ಬೇಡಿಕೆ ಬರುವ ಅಥವಾ ಈಗಿನ ದರ ಸ್ಥಿರತೆ ಕಾಯ್ದುಕೊಳ್ಳಬಹುದೆಂಬುದು ಮಾರುಕಟ್ಟೆ ಅಧ್ಯಯನದಲ್ಲಿ ತೊಡಗಿರುವವರ ಅಭಿಪ್ರಾಯ. ಭಾರತದಲ್ಲಿ ಕರ್ನಾಟಕ ಕಾಫಿ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದ್ದು, ಕೇರಳ ಹಾಗು ತಮಿಳುನಾಡು ನಂತರದಲ್ಲಿವೆ.

## ಸಿನಿಮಾ ವೀಕ್ಷಣೆಗೆ ತೆರಳುತ್ತಿದ್ದವರ ಸಾವು

• ಪ್ರಜೋದಯ ವರದಿ



**ಕೊಣನೂರು :** ಅರಕಲಗೂಡು ತಾಲ್ಲೂಕಿನ ಬಸವಾಪಟ್ಟಣ ಸಮೀಪ ಸ್ವಿಫ್ಟ್ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಇಬ್ಬರು ಮೃತ ಪಟ್ಟಿರುವ ಘಟನೆ ಶನಿವಾರ ರಾತ್ರಿ ನಡೆದಿದೆ.

ಕೊಣನೂರಿನ ದರ್ಶನ್ (25), ಕಬ್ಬಳಿ ಗೆರೆಯ ರಂಗನಾಥ ಪ್ರಸಾದ್ (22) ಮೃತರು. ರಜನಿಕಾಂತ್ ನಟನೆಯ ಕೂಲಿ ಸಿನಿಮಾ ವೀಕ್ಷಣೆಗೆ ಮೈಸೂರಿಗೆ ತೆರಳುತ್ತಿದ್ದರು. ರಾತ್ರಿ 10 ಗಂಟೆಗೆ ಸಿನಿಮಾ ಆರಂಭವಾಗುತ್ತಿದ್ದರಿಂದ ಬೇಗ ತಲುಪಲೆಂದು 8 ಗಂಟೆಗೆ ಕೊಣ ನೂರಿನಿಂದ ತೆರಳುತ್ತಿದ್ದರು. ರಂಗನಾಥ್ ಪ್ರಸಾದ್ ವಾಹನವನ್ನು ಜೋರಾಗಿ ಓಡಿಸಿದ್ದರಿಂದ ರಾಜ್ಯ ಹೆದ್ದಾರಿ ವಿಭಜಕಕ್ಕೆ ಡಿಕ್ಕಿಯಾಗಿದೆ ಎನ್ನ ಲಾಗಿದೆ. ಅಪಘಾತದ ರಭಸಕ್ಕೆ ವಾಹನ ಸಂಪೂರ್ಣ ಜಖಂಗೊಂಡಿದೆ. ಕೊಣನೂರು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

## ಗೇಕರವಳ್ಳಿ ಗ್ರಾಮಸ್ಥರಿಗೆ ಶೀಘ್ರ ನಿವೇಶನ: ಭರವಸೆ

• ಪ್ರಜೋದಯ ವರದಿ

**ಹಾಸನ:** ಬಡಾವಣೆ ನಿರ್ಮಾಣಕ್ಕಾಗಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೂಮಿ ನೀಡಿದರೆ ರೈತರಿಗೆ ಶೀಘ್ರದಲ್ಲಿ ನಿವೇಶನ ಹಂಚಿಕೆ ಮಾಡಲಾಗುವುದೆಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಭರವಸೆ ನೀಡಿದರು.

ತಾಲ್ಲೂಕಿನ ಗೇಕರಹಳ್ಳಿ ಗ್ರಾಮದಲ್ಲಿ ಭಾನುವಾರ ಶ್ರೀಮತಿ ಚನ್ನಮ್ಮ ಮತ್ತು ಹೆಚ್.ಡಿ. ದೇವೇಗೌಡ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದ ಜನರ ಬಹು ದಿನಗಳ ಬೇಡಿಕೆ ಆಗಿದ್ದ ಸಮುದಾಯ ಭವನ ಇಂದು ಉದ್ಘಾಟನೆಯಾಗಿದೆ. ಗ್ರಾಮಸ್ಥರು ಅದರ ಸದುಪಯೋಗ ಪಡೆಯಬೇಕು. ಮೂಲಸೌಕರ್ಯ ಕಲ್ಪಿಸುವಂತೆ ಅನೇಕರು ಮನವಿ ಸಲ್ಲಿಸಿದ್ದಾರೆ. ನಿಮ್ಮೆಲ್ಲರ ಸಹಕಾರದಿಂದ ಶಾಸಕನಾಗಿದ್ದೇನೆ. ಮತದಾರರ ಋಣ ತೀರಿಸುವ ಹೊಣೆ ನನ್ನ ಮೇಲಿದೆ ಎಂದರು. ಈ ಭಾಗದಲ್ಲಿ ವಿವಿಧ ಗ್ರಾಮಗಳ ಜನರು ತಮ್ಮ ಕೃಷಿ ಭೂಮಿಯನ್ನು ಲೇ ಔಟ್ ನಿರ್ಮಾಣಕ್ಕೆ ಬಿಟ್ಟು ಕೊಟ್ಟಿದ್ದಾರೆ. ಆದರೆ ಅವರಿಗೆ ಸಿಗಬೇಕಾದ ಪರ್ಯಾಯ ನಿವೇಶನ ಇನ್ನು ಸಿಕ್ಕಿಲ್ಲ. ಮುಂದಿನ ವಾರದಲ್ಲಿ ಹುಡಾ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ ನಿವೇಶನ ಕೊಡಿಸುವ ಕೆಲಸ ಮಾಡಲಾಗುವುದೆಂದು ಭರವಸೆ ನೀಡಿದ್ದರು.





ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸ್ವಾಮಿಗೌಡ ಅವರು ಮಾತನಾಡಿ, ದಿ. ಮಾಜಿ ಶಾಸಕ ಹೆಚ್.ಎಸ್. ಪ್ರಕಾಶ್ ಅವರ ಅವಧಿಯಲ್ಲೇ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿತ್ತು.

» ನಾಲ್ಕನೇ ಪುಟದಲ್ಲಿ

## ಧರ್ಮಸ್ಥಳ: ಸದನದಲ್ಲಿಂದು ಉತ್ತರ

• ಪ್ರಜೋದಯ ವರದಿ



**ಚಾಮರಾಜನಗರ:** ಧರ್ಮಸ್ಥಳದಲ್ಲಿ ನೂರಾರು ಹೆಣ ಹೂತು ಹಾಕಿದ್ದಾರೆಂಬ ಪ್ರಕರಣ ಸಂಬಂಧ ರಚಿಸಲಾಗಿದ್ದ ಎಸ್‌ಐಟಿ ತನಿಖಾ ವರದಿ ಕುರಿತು ಆ. 18ರ ಸೋಮವಾರ ಸದನದಲ್ಲಿ ಮಾಹಿತಿ ನೀಡುತ್ತೇನೆಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ಈ ವಿಚಾರದಲ್ಲಿ ಯಾರೂ ರಾಜಕಾರಣ ಮಾಡ ಬಾರದು. ಇದು ನ್ಯಾಯ ಮತ್ತು ಕಾನೂನಿಗೆ ಸಂಬಂಧಪಟ್ಟಂತಹ ವಿಚಾರ. ಯಾರೇ ದೂರು ಕೊಟ್ಟರೂ ಎಫ್‌ಐಆರ್ ದಾಖಲಿಸಿ ತನಿಖೆ ಮಾಡುವುದು ಸಹಜ. ಧರ್ಮಸ್ಥಳದಲ್ಲಿ ಎಸ್‌ಐಟಿ ತನಿಖೆ ನಡೆಯುತ್ತಿದೆ, ಅದು ಅಂತಿಮವಾಗಲಿ. ಮಧ್ಯಂತರ ವರದಿ ಬಗ್ಗೆ ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಅದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲವೆಂದರು.

## ಪರಿಸರ ಸ್ನೇಹಿ ಗಣೇಶೋತ್ಸವಕ್ಕೆ ಎ.ಟಿ.ರಾಮಸ್ವಾಮಿ ಸಲಹೆ

• ಪ್ರಜೋದಯ ವರದಿ

**ಹಾಸನ:** ಪರಿಸರ ಸ್ನೇಹಿ ಗಣೇಶೋತ್ಸವದ ಮೂಲಕ ಸಾರ್ವಜನಿಕರು ನಿಸರ್ಗಕ್ಕೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಪರಿಸರಕ್ಕಾಗಿ ನಾವು ಸಂಘಟನೆ ರಾಜ್ಯಾಧ್ಯಕ್ಷ ಎ.ಟಿ. ರಾಮಸ್ವಾಮಿ ಅವರು ಸಲಹೆ ನೀಡಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಒಂದೇ ಮಾತರಂ ಸಮಿತಿಯಿಂದ ಭಾನುವಾರ ನಡೆದ ನನ್ನ ಗಣಪ ಮಣ್ಣಿನ ಗಣಪ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿ, ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಓಪಿ) ಗಣಪತಿ ಮಣ್ಣಿನಲ್ಲಿ ಕರಗುವುದಿಲ್ಲ. ರಾಸಾಯನಿಕ ಬಳಸುವುದರಿಂದ ಭೂಮಿಗೆ ಅಪಾರ ಹಾನಿಯುಂಟು ಮಾಡುತ್ತವೆ.



ಅದರ ಬದಲು ಮಣ್ಣಿನಿಂದ ತಯಾರಾದ ಬಣ್ಣ ರಹಿತ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಹಬ್ಬ ಆಚರಿಸಬೇಕೆಂದು ಸಲಹೆ ನೀಡಿದರು. ಪರಿಸರ ಚೆನ್ನಾಗಿದ್ದರೆ ನಾವು

» ನಾಲ್ಕನೇ ಪುಟದಲ್ಲಿ

**ಪಾರದರ್ಶಕ ತನಿಖೆಗೆ ಧರ್ಮಾಧಿಕಾರಿಯೂ ಒತ್ತಾಯಿಸಿದ್ದಾರೆ | ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ**

## ಧರ್ಮಸ್ಥಳ ಕ್ಷೇತ್ರದ ಕುರಿತು ಅಪಪ್ರಚಾರ ನಿಲ್ಲಬೇಕು

• ಪ್ರಜೋದಯ ವರದಿ

**ಸಕಲೇಶಪುರ :** ಧರ್ಮಸ್ಥಳದ ವಿಚಾರದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ನಡೆಯುತ್ತಿರುವುದರಿಂದ ಕೋಟ್ಯಾಂತರ ಭಕ್ತರಿಗೆ ನೋವುಂಟಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದರು.

ರಾಜ್ಯ ಬಿಜೆಪಿಯಿಂದ ಭಾನುವಾರ ಧರ್ಮಸ್ಥಳದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಚಲೋ ಅಭಿಯಾನದಿಂದ ವಾಪಾಸ್ ಆಗುತ್ತಿರುವಾಗ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ದಿನೇಶ್ ಗುಂಡೂರಾವ್ ಅವರು ಎಡಪಂಥೀಯರ ಒತ್ತಡಕ್ಕೆ ಮಣಿದು ಎಸ್‌ಐಟಿ ರಚಿಸಿದ್ದೇವೆಂದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇದರ ಹಿಂದೆ ಷಡ್ಯಂತ್ರದ ಹೇಳಿಕೆ ನೀಡಿದರು. ಈ ಬಗ್ಗೆ ತನಿಖೆ ಆಗಲಿ, ಸತ್ಯ ಹೊರಬರಲಿ ಎಂದು ರಾಜ್ಯದ ಜನರು ಕೇಳುತ್ತಿದ್ದಾರೆಂದು ವಿಜಯೇಂದ್ರ ಹೇಳಿದರು.

ಇದೆಲ್ಲದರ ನಡುವೆ ಯಾರದೋ ಒತ್ತಡಕ್ಕೆ ಮಣಿದು ತನಿಖೆ ಹಾದಿ ತಪ್ಪುತ್ತಿದೆ ಎಂಬ ಗುಮಾನಿಯೂ ಕಾಡುತ್ತಿದೆ. ಕ್ಷೇತ್ರಕ್ಕೆ ಆಗುತ್ತಿರುವ ಅಪಪ್ರಚಾರ ತಡೆಯುವ ಕೆಲಸವನ್ನು ಸರ್ಕಾರ ಏಕೆ ಮಾಡಲಿಲ್ಲ. ತನಿಖೆ ಬೇಗ ಮುಗಿಸಿ ಸದನದಲ್ಲಿ ಮಧ್ಯಂತರ ವರದಿ ಮಂಡನೆ ಮಾಡಬೇಕೆಂದು ಆಗ್ರಹಿಸಿದರು. ಅನಾಮಿಕ ದೂರದಾರನ ಹಿಂದಿರುವ ಶಕ್ತಿ ಯಾವುದು. ಅವರ ಉದ್ದೇಶ ಏನು ಎಂಬುದರ ಬಗ್ಗೆ ಸಮಗ್ರ ತನಿಖೆ ಆಗಬೇಕು. ಈ ವಿಚಾರದಲ್ಲಿ ಬಿಜೆಪಿ ರಾಜಕಾರಣ ಮಾಡುತ್ತಿಲ್ಲ. ಧರ್ಮಸ್ಥಳ ಅಸಂಖ್ಯಾತ ಭಕ್ತರು ನಂಬಿರುವ ಪುಣ್ಯ ಕ್ಷೇತ್ರ. ಹಿಂದೂಗಳ ಭಾವನೆಗೆ ಧಕ್ಕೆ ಬಂದಾಗ ಎಚ್ಚರಿಸಬೇಕು, ಆ ಕೆಲಸವನ್ನು ನಾವು ಮಾಡಿದ್ದೇವೆಂದು ಹೇಳಿದರು.




ಬಿಜೆಪಿಯ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಎಸ್‌ಐಟಿ ರಚಿಸಿದಾಗ ನಾವು ಸ್ವಾಗತ ಮಾಡಿದ್ದೇವೆ. ಆದರೆ ತನಿಖೆ ಹೆಸರಿನಲ್ಲಿ ದಿನಕ್ಕೊಂದು ಕಡೆ ಗುಂಡಿ ತೆಗೆಯುತ್ತಿರುವ ಸರ್ಕಾರ ತನಿಖಾ ಸಂಸ್ಥೆಗಳ ಮೇಲೆಯೇ ಅಪನಂಬಿಕೆ ಹುಟ್ಟಿಸುತ್ತಿದೆ. ಜನರ ಭಾವನೆ ಮತ್ತು ಧಾರ್ಮಿಕ ಶ್ರದ್ಧೆಗೆ ಧಕ್ಕೆ ಆಗಬಾರದು. ಈ ನಿಟ್ಟಿನಲ್ಲಿ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಿದ್ದೇವೆ, ಸದನದಲ್ಲಿ ಮಾತನಾಡಿದ್ದೇವೆಂದು ಸ್ಪಷ್ಟಪಡಿಸಿದರು.

ನಾಡಿನ ಜನರು ಎಲ್ಲವನ್ನೂ ಶಾಂತಿಯಿಂದ ನೋಡುತ್ತಿದ್ದಾರೆ. ಹೀಗೆ ಮುಂದುವರಿದರೆ ಜನರು ಬೀದಿಗೆ ಬರುವ ಪರಿಸ್ಥಿತಿ ನಿರ್ಮಾಣ

» ನಾಲ್ಕನೇ ಪುಟದಲ್ಲಿ

# ಕಪ್ಪು ಕುಳಿ ಒಂದು ಅಚ್ಚರಿ



**ಇ**ರುಳಲ್ಲಿ ಆಗಸದೆಡೆ ಕಣ್ಣು ಹಾಯಿಸಿದಾಗ, ಒಂದು ಅದ್ಭುತ ಲೋಕವೇ ನಮ್ಮ ಕಣ್ಣೆದುರಿಗೆ ತೆರೆದುಕೊಳ್ಳುತ್ತದೆ. ಕೋಟಿ ಕೋಟಿ ಕಿಲೋ ಮೀಟರ್ ದೂರದಲ್ಲಿರುವ ಅರಿಲ್ಗಳು ಆಗಸದಲ್ಲಿ ರುವ ರಂಗೋಲಿಯ ಚುಕ್ಕೆಯಂತೆ ಕಾಣುತ್ತವೆ. ಆದರೆ ಚಂದಿರ ಅವುಗಳಿಗಿಂತ ಗಾತ್ರದಲ್ಲಿ ಚಿಕ್ಕ ದಿದ್ದರೂ ದೊಡ್ಡದಾಗಿ ಕಾಣುತ್ತಾನೆ. ಈ ಚುಕ್ಕೆಯಂತೆ ಕಾಣುವ ಅರಿಲ್ಗಳು ನಮ್ಮ ಭೂಮಿಗೆ ಕೋಟ್ಯಾಂತರ ಬೆಳಕಿನ ವರುಷ ದೂರದಲ್ಲಿರುತ್ತವೆ. ಅಲ್ಲದೇ ನಮ್ಮ ನೇಸರನಿಗಿಂತ ದೊಡ್ಡ ದಿರಬಹುದು. ನಮ್ಮ ನೇಸರ ಬಳಗವು, ನಮ್ಮ ಮಿಲ್ಕಿವೇ/ಹಾಲ್ಗಡಲು ಅರಿಲ್ವಳಿಯಲ್ಲಿರುವ ಒಂದು ಪುಟ್ಟ ಬಳಗ ಅಷ್ಟೆ. ನೇಸರನಂತಹ ಕೋಟ್ಯಾಂತರ ಅರಿಲ್ಗಳು, ಸುತ್ತುಗಗಳು ಸೇರಿ ಹಲ ವಾರು ಬಾನಿನ ವಸ್ತುಗಳನ್ನು ಮಿಲ್ಕಿವೇ/ಹಾಲ್ಗಡಲು ಹೊಂದಿದೆ. ಅಂತೆಯೇ ಈ ಬ್ರಹ್ಮಾಂಡದಲ್ಲಿ ಮಿಲ್ಕಿವೇ/ಹಾಲ್ಗಡಲು ಅಂತಹ ಕೋಟ್ಯಾಂತರ ಅರಿಲ್ವಳಿಗಳೂ ಕೂಡಾ ಇವೆ. ಇವಿಷ್ಟು ನಮ್ಮ ಮೇಲ್ನೋಟಕ್ಕೆ ಕಾಣುವ ಪ್ರಪಂಚವಾದರೆ, ನಮಗೆ ಕಾಣದ್ದು, ನಮ್ಮರಿವಿಗೆ ಇನ್ನೂ ಬಾರದೇ ಇರುವುದು ಸಾಕಷ್ಟಿದೆ. ಇಂತಹ ಅಚ್ಚರಿಯನ್ನು ಒಳಗೊಂಡಿರುವ ಇನ್ನೊಂದು ಸಂಗತಿಯೆಂದರೆ ಅದು ಕಪ್ಪು ಕುಳಿ.

ಏನಿದು ಕಪ್ಪು ಕುಳಿ? ಇದು ಹೇಗೆ ಹುಟ್ಟುತ್ತದೆ? ಇದರ ಪರಿಣಾಮಗಳೇನು? ನಮ್ಮ ಅರಿಲ್ವಳಿ ಯಲ್ಲಿಯೂ ಇದು ಇರುವುದಾ? ಕಣ್ಣಿಗೆ ಕಾಣುವುದಾ? ಹೀಗೆ ಹಲವಾರು ಕುತೂಹಲಗಳಿಗೆ ಉತ್ತರ ಕಂಡುಕೊಳ್ಳುವ ಮೊಗಸು ಮಾಡೋಣ.

ಕಪ್ಪು ಕುಳಿಯ ಬಗೆಗೆ ಅರಿಯುವ ಮುನ್ನ ಈ ಕೆಳಗಿನ ವಿಷಯಗಳ ಬಗೆಗೆ ತಿಳಿದುಕೊಂಡರೆ ಲೇಸು.

ತನ್ಸೆಳೆತದ ಬಗೆಗೆ ಗೊತ್ತಿರಬಹುದು. ಒಂದು ವಸ್ತುವಿನ ರಾಶಿ ಹೆಚ್ಚಾದಂತೆ, ಆ ವಸ್ತು ಇತರ ವಸ್ತುಗಳನ್ನು ತನ್ನತ್ತ ಸೆಳೆಯುವ ಕಸುವು ಹೆಚ್ಚಾಗುತ್ತದೆ. ನೇಸರನ ತನ್ಸೆಳೆತ ನಮ್ಮ ಇಳೆಗಿಂತ ಹೆಚ್ಚಾಗಿದೆ. ಆದುದರಿಂದಲೇ ಇಳೆಯು ನೇಸರನ ಸುತ್ತ ಸುತ್ತುತ್ತದೆ. ಹಾಗೆಯೇ ನಾವು ಭೂಮಿಯ ಮೇಲೆ ಜಿಗಿದಾಗ, ಹೆಚ್ಚು ಎತ್ತರ ಜಿಗಿಯಲಾರೆವು. ಆದರೆ ಚಂದಿರನ ಮೇಲೆ ಜಿಗಿದರೆ, ಇಳೆಯಲ್ಲಿ ಜಿಗಿದುದ್ದಕ್ಕಿಂತ ಎತ್ತರಕ್ಕೆ ಜಿಗಿಯಬಲ್ಲೆವು. ಇಳೆ ಮತ್ತು ಚಂದಿರನಲ್ಲಿರುವ ಬೇರೆ ಬೇರೆ ತನ್ಸೆಳೆತದ ಮಟ್ಟವೇ ಇದಕ್ಕೆ ಕಾರಣ.

ನಮ್ಮ ಅರಿಲ್ವಳಿಯಲ್ಲಿ ಒಂದು ಅರಿಲ್ ಹುಟ್ಟಬೇಕಾದರೆ ಹಲವಾರು ಆಗುಹೋಗುಗಳ ಹಂತಗಳನ್ನು ದಾಟಬೇಕು. ಒಂದು ಹಂತದಿಂದ ಇನ್ನೊಂದು ಹಂತ ಹೋಗುವ ಮುನ್ನ, ಪ್ರತಿ ಹಂತವು ತನ್ನದೇ ಆದ ಮುಂಕಟ್ಟಳೆಗಳನ್ನು ಹೊಂದಿರುತ್ತದೆ.

ಈಗ ಕಪ್ಪು ಕುಳಿಯ ಬಗೆಗೆ ಬರುವುದಾದರೆ, ಕಪ್ಪು ಕುಳಿ ನಮ್ಮ ಹೊರಬಾನಿನಲ್ಲಿರುವ/ಬಾನ ಬಯಲಿನಲ್ಲಿರುವ ಒಂದು ಎಡೆಯಾಗಿದೆ. ಈ ಎಡೆಯು ಕಣ್ಣಿಗೆ ಕಾಣುವುದಿಲ್ಲ, ಆದರೆ ಇದರ ತನ್ಸೆಳೆತ ಎಷ್ಟರ ಮಟ್ಟಿಗೆ ಇರುತ್ತದೆಯೆಂದರೆ ತನ್ನ ಸರಹದ್ದಿನಲ್ಲಿ ಬರುವ ಯಾವ ಬಾನಿನ ವಸ್ತು ಗಳನ್ನೂ ಇದು ಹೊರ ಹೋಗಲು ಬಿಡುವುದಿಲ್ಲ. ಸೆಕೆಂಡಿಗೆ 3 ಲಕ್ಷ ಕೀ.ಮೀ. ಸಾಗುವ ಬೆಳಕು ಕೂಡ ಇದನ್ನು ದಾಟಿ ಸಾಗಲಾರದು.

ಕಣ್ಣಿಗೆ ಕಾಣುವುದಿಲ್ಲ ಅಂದಮೇಲೆ ಇದನ್ನು ಗುರುತಿಸುವುದಾದರೂ ಹೇಗೆ? ಇದರ ಬಗೆಗಳೇನು ಮತ್ತು ಇವುಗಳೆಷ್ಟು ದೊಡ್ಡದಿರುತ್ತವೆ?

ಕಪ್ಪುಕುಳಿ ಕಣ್ಣಿಗೆ ಕಾಣದಿದ್ದರೂ ಇದರ ಹಾವಳಿ, ಇದು ತನ್ನ ಸರಹದ್ದಿನೆಡೆ ಬರುವ ವಸ್ತುಗಳ ಮೇಲೆ ಬೀರುವ ಪರಿಣಾಮದ ಮೇಲೆ ಇದನ್ನು ಪತ್ತೆ ಹಚ್ಚಬಹುದು. ಅದರ ಸುತ್ತ ಕೆಲವೊಮ್ಮೆ ಸುತ್ತುವ ಬಿಸಿ ಹೊಗೆ, ದೂಳು, ಅವುಗಳಿಂದ ಹೊರಹೊಮ್ಮುವ ಕಿರಣಗಳು/ಕದಿರುಗಳು ಹೀಗೆ ಇಂತಹ ಸಂಗತಿಗಳು ಕಪ್ಪುಕುಳಿಯ ಬಗ್ಗೆ ತಿಳಿದುಕೊಳ್ಳಲು ಸುಳಿವು ನೀಡುತ್ತವೆ. ಇವುಗಳನ್ನು ವಿಶೇಷ ಗೆಂಟುತೋರುಗದಿಂದ(ಟೆಲಿಸ್ಕೋಪ್) ನೋಡಬಹುದು.

ಕಪ್ಪು ಕುಳಿಗಳು ಒಂದು ಚಿಕ್ಕ ಅಣುವಿನಷ್ಟಿರಬಹುದು. ಅವುಗಳನ್ನು ಪುಟಾಣಿ ಕಪ್ಪುಕುಳಿ ಅನ್ನಬಹುದು. ಇಂತಹವುಗಳು ಜಗತ್ತು ಹುಟ್ಟುವಾಗ (ಬಿಗ್ ಬ್ಯಾಂಗ್) ಹುಟ್ಟಿರಬಹುದು ಎಂದು ಊಹಿಸಲಾಗಿದೆ. ಎರಡನೆಯದು ಆವಿಮೋಡದ ಕಪ್ಪುಕುಳಿ ಅತವಾ ಸ್ಟೆಲ್ಲಾರ್ ಕಪ್ಪು ಕುಳಿಗಳು. ಅವುಗಳು ದೊಡ್ಡ ಅರಿಲ್ಗಳು ಸಿಡಿದಾಗ ಹುಟ್ಟುತ್ತವೆ. ಇವುಗಳು ನಮ್ಮ ನೇಸರನ ರಾಶಿಯ 20 ಪಟ್ಟು ಇರಬಹುದು. ನಮ್ಮ ಅರಿಲ್ವಳಿಯಲ್ಲಿ ಸಾಕಷ್ಟು ಆವಿಮೋಡದ ಕಪ್ಪುಕುಳಿ ಗಳಿರುವವು. ಇನ್ನೊಂದು ನಡು ಗಾತ್ರದ ಕಪ್ಪುಕುಳಿಗಳು. ಕೊನೆಯದು ಬಹುದೊಡ್ಡ/ದಡೂತಿ ಕಪ್ಪುಕುಳಿಗಳು. ಇಂತಹ ಕಪ್ಪುಕುಳಿಗಳು, ಅರಿಲ್ವಳಿಗಳು ಹುಟ್ಟುವ ಹೊತ್ತಿಗೆ ಹುಟ್ಟುತ್ತವೆ ಎನ್ನ ಲಾಗಿದೆ. ಅವುಗಳು ಹೆಚ್ಚಾಗಿ ಅರಿಲ್ವಳಿಯ ನಡುವೆ ಕಂಡುಬರುತ್ತವೆ. ಇವು ನಮ್ಮ ನೇಸರನಿಗಿಂತ ಲಕ್ಷ, ಕೋಟಿ ಪಟ್ಟು ಹೆಚ್ಚು ಮಾಸ್ ಹೊಂದಿರಬಹುದು. ನಮ್ಮ ಮಿಲ್ಕಿವೇ/ಹಾಲ್ಗಡಲು ಅರಿ ಲ್ವಳಿಯ ನಡುವೆ ಇರುವ ಕಪ್ಪುಕುಳಿಯನ್ನು ಸ್ಯಾಗಿಟೇರಿಯಸ್-ಎ ಎಂದು ಕರೆಯಲಾಗುತ್ತದೆ. ಇದು ನಮ್ಮ ನೇಸರನಗಿಂತ ನಲವತ್ತು ಲಕ್ಷ ಪಟ್ಟು ಹೆಚ್ಚು ರಾಶಿ ಹೊಂದಿದೆ. ಟಾನ್-618 (-618) ಇದು ಇದುವರೆಗೆ ಪತ್ತೆಯಾಗಿರುವ ಜಗತ್ತಿನ ಅತಿ ದೊಡ್ಡ ಕಪ್ಪುಕುಳಿಯಾಗಿದೆ. ಇದರ ರಾಶಿ ನಮ್ಮ ನೇಸರನ ರಾಶಿಗಿಂತ 6600 ಕೋಟಿ ಪಟ್ಟು ಹೆಚ್ಚಿದೆ ಎಂದು ಅಂದಾಜಿಸಲಾಗಿದೆ.

ಕಪ್ಪುಕುಳಿಗಳ ತನ್ಸೆಳೆತ ಅಷ್ಟೊಂದು ಹೆಚ್ಚಿರುವುದರಿಂದ ಬಾನಿನಲ್ಲಿರುವ ಎಲ್ಲಾ ವಸ್ತುಗಳನ್ನು ನುಂಗುತ್ತಾ ನಮ್ಮ ಇಳೆಯನ್ನು ನುಂಗಬಹುದು ಎಂಬ ದಿಗಿಲು ಇದ್ದರೆ, ಅಂತಹ ದಿಗಿಲು ಬೇಡ. ಏಕೆಂದರೆ ಸದ್ಯಕ್ಕೆ ಯಾವುದೇ ಕಪ್ಪುಕುಳಿಗಳು ನೇಸರ ಬಳಗದ ಬಳಿ ಅಷ್ಟು ಹತ್ತಿರದಲ್ಲಿ ಇಲ್ಲ. ರಿಲೇಟಿವಿಟಿ ಚಳಕದ (ಹೋಲಿಕೆಯ ಚಳಕ) ಪ್ರಕಾರ ನಮ್ಮ ನೇಸರ ಕಪ್ಪುಕುಳಿ ಆಗಲು ಸಾಧ್ಯವಿಲ್ಲ. ಯಾವುದೇ ಅರಿಲ್ ಕಪ್ಪುಕುಳಿ ಆಗಲು ಅದರ ರಾಶಿ ಕೊನೆಯ ಪಕ್ಷ ನಮ್ಮ ನೇಸರಗಿಂತ ಮೂರು ಪಟ್ಟಾದರೂ ಹೆಚ್ಚಿರಬೇಕು. ಕಪ್ಪುಕುಳಿಯ ಆಗುಹದ ಅಂಚಿನೊಳಗೆ ಯಾವುದೇ ವಸ್ತು/ಬೆಳಕು ಹೋದಲ್ಲಿ ಅದು ಕಳೆದುಹೋಗುತ್ತದೆ. ಅದರ ಹತ್ತಿರ ಹೋದಲ್ಲಿ, ಅಲ್ಲಿರುವ ಹೊತ್ತಿನೆಡೆ ಬಾಗುತ್ತದೆ. ಈ ಕಾರಣಕ್ಕೆ ಕಪ್ಪುಕುಳಿಯ ಮೇಲೆ ಹಲವಾರು ಅರಿಮೆಯ ಕಟ್ಟುಕತೆಗಳು ಹೆಣೆಯಲಾಗಿದ್ದು, ಅದರಲ್ಲಿ ಟೈಮ್ ಟ್ರಾವೆಲ್ ಕತೆಗಳು ಕುತೂಹಲಕಾರಿ ಯಾಗಿರುತ್ತವೆ.

-ನಿತಿನ್ ಗೌಡ

# ಇಂಪಾದ ದನಿಯ ಶಾಮ ಹಕ್ಕಿ



**ಸು**ಮಾರು ಆರು ವರ್ಷಗಳ ಹಿಂದೆ ಬೇಸಗೆ ರಜೆಯಲ್ಲಿ ನಾನೊಮ್ಮೆ ಉತ್ತರಕನ್ನಡ ಜಿಲ್ಲೆಯ ಯೆಲ್ಲಾಪುರ ಸಮೀಪದ ಮಂಚಿಕೇರಿ ಎಂಬ ಹಳ್ಳಿಗೆ ಹೋಗಿದ್ದೆ. ಅಲ್ಲೇ ಸಮೀಪದ ಹಾಸಣಗಿ ಎಂಬ ಶಾಲೆಯಲ್ಲಿ ನಮ್ಮ ನಾಟಕದ ಗೆಳೆಯ ಅವಿನಾಶ ಮತ್ತು ಅವನ ಮಿತ್ರರು ಮಕ್ಕಳಿಗಾಗಿ ಬೇಸಿಗೆ ಶಿಬಿರವನ್ನು ನಡೆಸಿಕೊಡಲು ಹೋಗಿದ್ದರು. ಅದರ ಕೊನೆಯ ದಿನ ಮಕ್ಕಳಿಂದ ಆಲೀ ಬಾಬಾ ಮತ್ತು ನಲವತ್ತು ಕಳ್ಳರು ನಾಟಕ ಪ್ರದರ್ಶನ ಇದೆ ಎಂದು ತಿಳಿದು ನಾನದನ್ನು ನೋಡಲು ಒಂದು ದಿನ ಮೊದಲೇ ಹೋಗಿದ್ದೆ. ಮಂಚಿಕೇರಿಯಿಂದ ಸುಮಾರು ಎರಡು ಕಿಲೋ ಮೀಟರ್ ಒಳಗೆ ಸ್ವಲ್ಪ ಕಾಡುದಾರಿಯಲ್ಲಿ ಹೋದರೆ ಹಾಸಣಗಿ ಶಾಲೆ ಸಿಗುತ್ತಿತ್ತು. ಹೋದ ದಿನ ಬೇಸಿಗೆ ಶಿಬಿರದ ಮಕ್ಕಳ ಜೊತೆ ಸೇರಿ, ಅಲ್ಲಿನ ಸ್ಥಳೀಯ ಆಯೋಜಕರನ್ನು ಪರಿಚಯ ಮಾಡಿಕೊಂಡು ಬಹಳ ಸಂತೋಷದಿಂದ ದಿನ ಸಾಗಿತ್ತು. ರಾತ್ರಿ ಬಹಳ ಸೊಂಪಾಗಿ ನಿದ್ರೆಯೂ ಬಂದಿತ್ತು. ಬೆಳಿಗ್ಗೆ ಐದೂವರೆಗೆ ಎಚ್ಚರವೂ ಆಗಿತ್ತು.

ಎದ್ದು ಮುಖ ತೊಳೆದು ಸ್ವಲ್ಪ ದೂರ ವಾಕಿಂಗ್ ಹೋಗಿ ಬರೋಣ ಎಂದು ಹೊರಟೆ. ಸ್ವಲ್ಪ ದೂರ ಹೋದಾಗ ಯಾವುದೋ ಹಕ್ಕಿ ಇಂಪಾಗಿ ಹಾಡುವ ಧ್ವನಿ ಕೇಳಿಸಿತು. ಮಾತ್ರವಲ್ಲ ಒಂದಷ್ಟು ದೂರದಲ್ಲಿ ರಸ್ತೆಯ ಪಕ್ಕದ ಗಿಡದ ಕೊಂಬೆಯ ಮೇಲೆ ಉದ್ದ ಬಾಲದ ಹಕ್ಕಿಯೊಂದು ಕುಳಿತಿರುವುದು ಕಾಣಿಸಿತು. ಬೈನಾಕುಲರ್ ಹಿಡಿದು ನೋಡಿದರೆ ನಾನು ಈ ವರೆಗೂ ಕಂಡಿರದ ಹಕ್ಕಿ. ತಕ್ಷಣ ನೋಡಿದಾಗ ಮಡಿವಾಳ (ರಾಬಿನ್) ಹಕ್ಕಿಯಂತೆ ಕಾಣುವ ದೇಹದ ಆಕಾರ, ರಾಬಿನ್ ಹಕ್ಕಿಗಿಂತ ಉದ್ದವಾದ ಬಾಲ, ಬೆನ್ನು, ತಲೆ, ರೆಕ್ಕೆಯ ಬಾಗಗಳೆಲ್ಲ ಕಡುನೀಲಿ ಮಿಶ್ರಿತ ಕಪ್ಪು ಬಣ್ಣ, ಬೆನ್ನಿನ ಕೆಳಭಾಗ ಮತ್ತು ಬಾಲದ ಆರಂಭದಲ್ಲಿ ಶುಭ್ರ ಬಿಳಿ ಬಣ್ಣ, ಹೊಟ್ಟೆಯ ಭಾಗ ಕೇಸರಿ ಮಿಶ್ರಿತ ಕಂದು ಬಣ್ಣ.

ಪುರಾಣದ ಕಥೆಗಳಲ್ಲಿ ಬರುವ ಕೃಷ್ಣನ ಕೊಳಲಿನ ಧ್ವನಿಯಂತೆ ಇಂಪಾಗಿ ಹಾಡುವ ಈ ಹಕ್ಕಿಯ ಧ್ವನಿ ಮತ್ತು ಮೈಮೇಲಿನ ಕಡುನೀಲಿ ಮಿಶ್ರಿತ ಕಪ್ಪು ಬಣ್ಣ ನೋಡಿಯೇ ಈ ಹಕ್ಕಿಯ ಹೆಸರನ್ನು ಶಾಮ ಎಂದು ಇಟ್ಟಿರಬೇಕು. ಇಂಪಾಗಿ ಹಾಡುತ್ತಾ ಪೊದೆಗಳು ಮತ್ತು ನೆಲದ ಮೇಲೆ ಕುಪ್ಪಳಿಸುತ್ತಾ ಹುಳು ಹುಪ್ಪಟೆಗಳನ್ನು ತಿನ್ನುತ್ತಿದ್ದ ಈ ಹಕ್ಕಿಯನ್ನು ಸುಮಾರು ಅರ್ಧಗಂಟೆಯ ಕಾಲ ನೋಡುತ್ತಾ ಫೋಟೋ ತೆಗೆದದ್ದು ಅಚ್ಚಳಿಯದ ನೆನಪು. ರಾಬಿನ್ ಹಕ್ಕಿಯ ಅತ್ಯಂತ ಹತ್ತಿರದ ಸಂಬಂಧಿಯಾದ ಇದು ದಟ್ಟ ಕಾಡಿನಲ್ಲಿ, ಮನುಷ್ಯ ವಾಸದಿಂದ ದೂರ ಬದುಕುವುದೇ ಹೆಚ್ಚು. ಏಪ್ರಿಲ್‌ನಿಂದ ಜೂನ್ ತಿಂಗಳ ನಡುವೆ ಪೊದೆಗಳು ಅಥವಾ ಮರದ ಪೊಟರೆಗಳಲ್ಲಿ ಹುಲ್ಲು, ಬಿದಿರಿನ ಎಲೆ ಮತ್ತು ಕಡ್ಡಿಗಳ ಸಹಾಯದಿಂದ ಗೂಡು ಮಾಡಿ, ಮೊಟ್ಟೆ ಇಟ್ಟು ಮರಿ ಮಾಡುತ್ತದೆ. ಒಂದು ಕಾಲದಲ್ಲಿ ಅದರ ಇಂಪಾದ ಧ್ವನಿಗೆ ಮಾರು ಹೋಗಿ ಜನರು ಅದನ್ನು ಹಿಡಿದು ಪಂಜರದಲ್ಲಿ ಇಟ್ಟು ಸಾಕುತ್ತಿದ್ದರಂತೆ. ಆದರೆ ವನ್ಯಜೀವಿ ಸಂರಕ್ಷಣಾ ಕಾಯಿದೆಯ ಅನ್ವಯ ಇಂದು ಅದನ್ನು ಪಂಜರದಲ್ಲಿ ಕೂಡಿಹಾಕಿ ಸಾಕುವುದು ನಿಷಿದ್ಧ. ನೀವೂ ಕಾಡಿನ ಅಂಚಿನ ಊರುಗಳಿಗೆ ಪ್ರವಾಸ ಹೋದಾಗ ಈ ಹಕ್ಕಿ ನೋಡಲು ಸಿಗುತ್ತದೆಯೇ ಎಂದು ಗಮನಿಸಿ.

-ಅರವಿಂದ ಕುಡ್ಲ, ಬಂಟ್ವಾಳ

# ಎಮ್ಮೆಯೆಂದರೆ ಹೆಣ್ಣು

**ಬೇ**ಸಿಗೆ ರಜೆಯಲ್ಲಿ ಊರಿನಿಂದ ಚಿಕ್ಕಮ್ಮನ ಮಗಳು ವೈಶಾಲಿ ಬಂದಿದ್ದಳು. ಪೇಟೆಯಿಂದ ಹಳ್ಳಿಗೆ ಬಂದಿದ್ದ ಅವಳಿಗೆ ಎಲ್ಲವೂ ಕುತೂಹಲದ ಸಂಗತಿಗಳೇ. ಕೊಟ್ಟಿಗೆಯಲ್ಲಿದ್ದ ಕೋಣ ಮತ್ತು ಎಮ್ಮೆಗಳನ್ನು ಕಂಡು ಕೋಣ ಎಂದರೆ ಗಂಡು, ಎಮ್ಮೆ ಎಂದರೆ ಹೆಣ್ಣು ಎಂದು ಮನನ ಮಾಡಿಕೊಂಡು ನಂತರ ತನ್ನಷ್ಟಕ್ಕೇ ಹಾ ಹ್ಹಾ ಈಗ ಗೊತ್ತಾಯಿತು ಎಂದು ಖುಷಿಗೊಂಡಳು. ನಮ್ಮಲ್ಲಿ ಜಾನುವಾರುಗಳನ್ನು ಹೊರಗೆ ಮೇಯಲು ಬಿಡುತ್ತೇವೆ. ಬೆಳಿಗ್ಗೆ ಹೊರಬಿಟ್ಟ ಎಮ್ಮೆ ಸಂಜೆ ಹೊತ್ತಿಗೆ ವಾಪಾಸಾದಾಗ, ವೈಶಾಲಿ ಒಮ್ಮೆಗೆ ದೊಡ್ಡಮ್ಮ, ದೊಡ್ಡಮ್ಮ.. ಹೆಣ್ಣೆಮ್ಮೆ ಬಂತು ಬೇಗ ಬನ್ನಿ ಎಂದು ಕರೆದಾಗ ನಗುವ ಸರದಿ ನಮ್ಮದು.

- **ಹ ನಾ** ಸುಬ್ರಹ್ಮಣ್ಯ

# ಸಾಂಬ್ರಾಣಿ ಹೊಗೆ

**ನ**ನ್ನ ಮಗಳು ಮತ್ತು ಅಳಿಯ ವಿದೇಶದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನನ್ನ ಮಗಳ ಹೆರಿಗೆಯ ಸಮಯದಲ್ಲಿ ನಾನು ಅಲ್ಲಿಗೆ ಹೋಗಬೇಕಾದ ಪ್ರಸಂಗ ಬಂದಿತು. ಅಲ್ಲಿಗೆ ಹೋಗುವಾಗ ಬಾಣಂತಿಗೆ ಬೇಕಾಗುವ ಸ್ವಲ್ಪ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದೆ. ಅದರಲ್ಲಿ ಸಾಂಬ್ರಾಣಿ ಹುಡಿಯು ಒಂದು. ಮಗಳ ಹೆರಿಗೆಯ ನಂತರ ಒಂದು ದಿನ ಇದ್ದಿಲು ಹೊತ್ತಿಸಿ ಚಿಕ್ಕ ಕಡಾಯಿಯಲ್ಲಿ ಅದರ ಮೇಲೆ ಸಾಂಬ್ರಾಣಿ ಹೊಗೆ ಹಾಕಿದೆ. ಅದನ್ನು ಬಾಣಂತಿ ಕೋಣೆಗೆ ಒಯ್ಯುವಾಗ ಒಮ್ಮೆಲೆ ಜೋರಾದ ಶಬ್ದದ ಗಂಟೆ ಬಾರಿಸತೊಡಗಿತು. ಭಯದಿಂದ ಕೈಕಾಲೆಲ್ಲ ನಿಂತು ಹೋದಂತೆ ಭಾಸವಾಯಿತು. ಕ್ಷಣದಲ್ಲಿಯೇ ಏನಾಯಿತು ಎನ್ನುವ ಅಷ್ಟರಲ್ಲಿ ಕೋಣೆಯಿಂದ ನನ್ನ ಮಗಳು ಓಡಿ ಬಂದು ವಿದ್ಯುತ್ ಬಟನ್ ಆಫ್ ಮಾಡಿದಳು. ಆಗ ಶಬ್ದ ಬರುವುದು ನಿಂತು ಹೋಯಿತು. ನನ್ನ ಮಗಳು ಹೇಳಿದ ನಂತರ ತಿಳಿಯಿತು ಮನೆಯಲ್ಲಿ ಅಕಸ್ಮಾತ್ ಆಗಿ ಬೆಂಕಿ ಹೊಗೆ ಕಾಣಿಸಿಕೊಂಡರೆ ಮುಂಜಾಗ್ರತೆಯಿಂದ ಫೈರ್ ಅಲಾರ್ಮ್ ಆಗುವ ವ್ಯವಸ್ಥೆ ಇಟ್ಟಿರುತ್ತಾರಂತೆ. ಅಬ್ಬಾ! ಎಷ್ಟೊಂದು ಭಯವಾಗಿತ್ತು ಸಾಕಪ್ಪ ಸಾಕು. ಈ ಸಾಂಬ್ರಾಣಿ ಸಹವಾಸ ಎಂದು ಕೈಮುಗಿದೆ.

- **ಶೋಭಾ** ಸಿದ್ದಣ್ಣವರ್

## ನಗ್ಗೆ ಬುಗ್ಗೆ

# ಅಪ್ರಿಯ ಹೋಲಿಕೆ



ಸೊಸೆ ರೋದಿಸುತ್ತಲೇ ಮನೆ ಬಂದಳು. ಗಾಬರಿಗೊಂಡ ಅತ್ತೆ ಕಾರಣ ಕೇಳಿದಳು

ಯಾಕಮ್ಮಾ.. ಅಳ್ತೀಯಾ ಏನಾಯ್ತು?

ಅತ್ತೆ ನಾನು ತಾಟಕಿ ತರಹ ಇದ್ದೀನಾ?

ಛೇ ಯಾರು ಹೇಳಿದ್ದು?

"ಮತ್ತೆ, ನನ್ನ ಕಣ್ಣು ಕಪ್ಪೆಯಂತೆ ಹೊರಗೆ ಚಾಚಿದ್ಯಾ?

ಖಂಡಿತಾ ಇಲ್ಲ

ನನ್ನ ಮೂಗು ದೊಣ್ಣೆ ಮೆಣಸಿನಕಾಯಿ ತರಹ ಗುಂಡಗಿದ್ಯಾ?

ಇಲ್ವೇ ಇಲ್ಲ

ಮತ್ತೆ ನಾ ಏನಾದ್ರೂ ಎಮ್ಮೆಯಂತೆ ಕಪ್ಪಗೆ, ದಪ್ಪಗೆ ಇದ್ದೀನಾ?

ಇಲ್ಲಮ್ಮಾ,ಯಾರು ಹಾಗಂದದ್ದು?

ಮತ್ಯಾಕೆ ನಮ್ಮ ಓಣಿಯವರೆಲ್ಲಾ ಹಾಗೇಳೋದು ನೀನು ನಿಮ್ಮತ್ತೆ ಥರಾನೇ ಇದ್ದೀ ಅಂತಾ.!

**ಅವ್ರನ್ನೂ ಕರ್ಕೊಂಡು ತುಂಬ್ರೀ!**

ಬಿಜಾಪುರದ ನಗರದಲ್ಲಿ ಕೆಲಸ ಮಾಡುತ್ತಿದ್ದ ಸೂರಿಯ ಮನೆಯ ಬೀದಿಯಲ್ಲೇ ಆತನ ಸಹಾಯಕನ ಮನೆ ಇತ್ತು. ಅದೊಂದು ದಿನ ಸೂರಿಯ ಕಚೇರಿ ಜೀಪು ರಿಪೇರಿಗೆ ಕೊಟ್ಟಿದ್ದರಿಂದ ಮಧ್ಯಾಹ್ನದ ಊಟ ಮಾಡಿ ಬರಲು ತನಗೆ ಡ್ರಾಪ್ ಕೊಡುವಂತೆ ಸೂರಿ, ಸಹಾಯಕನಿಗೆ ಕೇಳಿದ್ದ. ಅದರಂತೆ ಆತ ತನ್ನ ಸ್ಕೂಟರ್ ಮೇಲೆ ಸೂರಿಯನ್ನು ಮನೆಗೆ ಬಿಟ್ಟು ಬಂದಿದ್ದ.

ಅರ್ಧ ಗಂಟೆ ನಂತರ ಮತ್ತೆ ಸೂರಿ ಸಹಾಯಕನ ಮನೆಗೆ ಬಂದಾತ ಆತ, ಒಂದೈದು ಮಿನಿಟ್ ಕೂತಿರಿ ಈಗ ಬಂದೆ ಎಂದು ಒಳಗೆ ಹೋಗಿದ್ದ. ಆಗ ಆತನ ಅರ್ಧಾಂಗಿ ರೂಮಿನಿಂದಲೇ ತನ್ನ ಪತಿಗೆ ರ್ರೀ,, ನಳಾ ಬಂದಾವ ನೀರು ತುಂಬಿ ಇಟ್ಟು ಹೋಗ್ರೀ ನನಗ ಯಾಕೋ ಸೊಂಟ ನೋಯ್ತಾ ಇದೆ. ಎಂದು ಹೇಳುತ್ತಿರುವುದು. ಅದಕ್ಕೆ ಪ್ರತಿಯಾಗಿ ಆಕೆಯ ಪತಿ, ಏಯ್ ಸುಮ್ನಿರು ಅಲ್ಲಿ ನಮ್ಮ ಸಾಹೇಬ್ರು ಬಂದ ಕೂತಾರ. ಎಂದು ಹೇಳಿದಾಗ ಆಕೆ, ಅದೇ ಸ್ವರದಲ್ಲಿ ಅದಕ್ಕೇನಂತ ಅವ್ರನ್ನೂ ಕರ್ಕೊಂಡು ತುಂಬ್ರೀ ಎನ್ನುವ ಮಾತು ಸೂರಿಯ ಕಿವಿ ಮೇಲೆ ಬೀಳುತ್ತಿದ್ದಂತೆ ಸದ್ದಿಲ್ಲದೇ ಆ ಬಿಸಿಲಲ್ಲಿ ಕಚೇರಿಗೆ ನಡೆದು ಹೋಗಿದ್ದ.

**ಉಚಿತ ಕೆಲಸ**

ವೈದ್ಯರು ಸೂರಿಗೆ ಔಷಧದ ಚೀಟಿ ಬರೆದು ಕೊಟ್ಟು ಹೀಗೆ ಹೇಳಿದರು.

ವೈದ್ಯ: ಇದು ದುಬಾರಿ ಬೆಲೆಯ ಔಷಧಿ. ಇದನ್ನು ತೆಗೆದುಕೋ. ಆರೋಗ್ಯ ಚೆನ್ನಾಗಿರುತ್ತದೆ.

ಸೂರಿ: ಸರ್ ನಾನು ತುಂಬಾ ಬಡವ. ನನ್ನ ಹತ್ರ ಅಷ್ಟೊಂದು ದುಡ್ಡಿಲ್ಲ.

ವೈದ್ಯ: ದುಡ್ಡಿನ ಬದಲು ಏನು ಕೊಡಲು ಸಾಧ್ಯ?

ಸೂರಿ: ನೀವು ನಿಮ್ಮ ಕೆಲಸಕ್ಕೆ ಹಣ ತಗೋಬೇಡಿ. ಉಚಿತವಾಗಿ ಚಿಕಿತ್ಸೆ ಕೊಡಿ. ನಾನು ನನ್ನ ಕೆಲಸದಲ್ಲಿ ನಿಮ್ಮ ಹತ್ರ ಹಣ ತಗೊಳಲ್ಲ. ಉಚಿತವಾಗಿ ಕೆಲಸ ಮಾಡಿಕೊಡುತ್ತೇನೆ.

ವೈದ್ಯ: ಓಕೆ. ನೀನೇನು ಕೆಲಸ ಮಾಡ್ತೀಯಾ?

ಸೂರಿ: ನಾನು ಸ್ಮಶಾನದಲ್ಲಿ ಸತ್ತವರನ್ನು ಸುಡುವ ಕೆಲಸ ಮಾಡ್ತೇನೆ, ಸರ್ !

**ಸಣ್ಣ ರೂಮ್**

ರೂಮ್ ಬಾಯ್: ಬನ್ನಿ ಸರ್ ನಿಮಗೆ ರೂಮ್ ತೋರಿಸುತ್ತೇನೆ.

ಸೂರಿ: ನಾನು ಇಲ್ಲಿ ಉಳಿಯುವುದಾ? ಇಷ್ಟು ಚಿಕ್ಕ ಕೋಣೆಯಲ್ಲಿ?

ರೂಮ್ ಬಾಯ್: ರೂಮ್ ಸೆಕೆಂಡ್ ಫ್ಲೋರ್ ನಲ್ಲಿದೆ. ಇದು ಲಿಫ್ಟ್ ಸರ್ !

**ಔಷಧಿ**

ಸೂರಿ: ತುಂಬ ದಿನಗಳಿಂದ ಕೆಮ್ಮುತ್ತಿದ್ದ ನಿನ್ನ ಹೆಂಡತಿಗೆ, ಕೆಮ್ಮು ಇದ್ದಕ್ಕಿದ್ದಂತೆ ವಾಸಿಯಾಯ್ತಲ್ಲ. ಎಲ್ಲಿ, ಯಾವ ಔಷಧಿ ಕೊಡಿಸಿದೆ?

ಗಾಂಪ: ಯಾವ ಔಷಧಿಯನ್ನೂ ಕೊಡಿಸಲಿಲ್ಲ. ವಯಸ್ಸಾದಂತೆ ಇದೆಲ್ಲಾ ಸಾಮಾನ್ಯ ಎಂದೆ ಅಷ್ಟೇ!

**ಪೇಪರ್**

ಸೂರಿ ಡೆಲ್ಲಿಗೆ ಹೋಗಿದ್ದ. ಡೆಲ್ಲಿಯ ರೈಲು ನಿಲ್ದಾಣದಲ್ಲಿ ಪೇಪರ್ ಅಂಗಡಿಗೆ ಹೋಗಿ ಪೇಪರ್ ಕೇಳಿದ.

ಅಂಗಡಿಯಾತ: ಯಾವ ಪೇಪರ್ ಕೊಡಲಿ, ಹಿಂದಿ ಅಥವಾ ಇಂಗ್ಲೀಷ್?

ಸೂರಿ: ಯಾವುದಾದರೊಂದು ಕೊಡಯ್ಯ. ನನಗೆಲ್ಲಿ ಓದು ಬರುತ್ತದೆ? ತಿಂಡಿ ಪೊಟ್ಟಣ ಕಟ್ಟಲಿಕ್ಕಾದರೆ ಸಾಕು !

# ಜಿಎಸ್‌ಟಿ ದರಗಳ ಇಳಿಕೆಯಿಂದ ಜನ, ಉದ್ದಿಮೆಗಳಿಗೆ ಅನುಕೂಲ




**8** ವರ್ಷಗಳ ಹಿಂದೆ ದೇಶದಲ್ಲಿ ಉತ್ಪಾದನೆಯಾಗುವ ಒಂದು ವಸ್ತುವಿನ ಮೇಲೆ ಕೇಂದ್ರ ಸರ್ಕಾರ ಉತ್ಪಾದನಾ ಸುಂಕ ಹಾಗೂ ರಾಜ್ಯಗಳು ವ್ಯಾಟ್‌ನಂತಹ ತೆರಿಗೆಯನ್ನು ಹೇರುತ್ತಿದ್ದವು. ಅದರ ಜೊತೆಗೆ ಒಂದೊಂದು ರಾಜ್ಯದಲ್ಲಿ ಒಂದೊಂದು ಬಗೆಯ ಸುಂಕವಿತ್ತು. ದೇಶಾದ್ಯಂತ ಒಂದು ಉತ್ಪನ್ನಕ್ಕೆ ಒಂದೇ ಬಗೆಯ ತೆರಿಗೆ ಹೇರುವ ಚಿಂತನೆ ಬಹಳ ಹಿಂದಿನಿಂದಲೂ ಇತ್ತು. ನರೇಂದ್ರ ಮೋದಿ ಸರ್ಕಾರ 2017ರ ಜು.1ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಯನ್ನು ಜಾರಿಗೊಳಿಸುವ ಮೂಲಕ ಆ ಕನಸನ್ನು ನನಸಾಗಿಸಿತ್ತು. ಇದೀಗ ಜಿಎಸ್‌ಟಿಗೆ ಆಮೂಲಾಗ್ರ ಬದಲಾವಣೆ ತರುವುದಾಗಿ ಸ್ವತಃ ಮೋದಿ ಅವರೇ ದೆಹಲಿಯ ಕೆಂಪುಕೋಟೆಯಲ್ಲಿ ಮಾಡಿದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಘೋಷಣೆ ಮಾಡಿದ್ದಾರೆ. ಅವರೇ ಹೇಳಿದ ಪ್ರಕಾರ, ದೀಪಾವಳಿಗೆ ಈ ಕೊಡುಗೆ ಜನರಿಗೆ ಸಿಗಲಿದೆ. ಹಲವು ವಸ್ತುಗಳ ಬೆಲೆ ಇಳಿಕೆಯಾಗಲಿದೆ. ಇಂತಹದ್ದೊಂದು ಸುಧಾರಣೆ ಆಗಬೇಕಿತ್ತು ಎಂದು ಜನರು ಹಾಗೂ ವ್ಯಾಪಾರಿಗಳು ಮೊದಲಿ ನಿಂದಲೂ ಆಗ್ರಹ ಮಾಡಿಕೊಂಡು ಹಿಂದಿದ್ದರು. ಅದು ಸಾಕಾರವಾಗುವ ದಿನ ಸನಿಹವಾಗುತ್ತಿದೆ. ಅದರಿಂದ ಉತ್ಪನ್ನ ಖರೀದಿಸುವ ಜನರ ಮೇಲಿನ ಹೊರೆ ತಗ್ಗಲಿದೆ. ಇದು ನಿಜಕ್ಕೂ ಜನಸ್ನೇಹಿಯಾದ ಕ್ರಮ. ಮೋದಿ ಅವರು ಇಂತಹ ಘೋಷಣೆ ಮಾಡಲು ಆಯ್ದುಕೊಂಡಿರುವ ಸಮ ಯವೂ ಸೂಕ್ತವಾಗಿದೆ. ಭಾರತದ ಮೇಲೆ ಅಮೆರಿಕ ಸುಂಕ ಬರೆ ಹೇರುತ್ತಿರುವುದರಿಂದ ದೇಶೀಯವಾಗಿಯೇ ಮಾರಾಟ ಹೆಚ್ಚಿಸಲು ಜಿಎಸ್‌ಟಿ ದರ ಇಳಿಕೆ ಅನುಕೂಲವಾಗಲಿದೆ ಎಂಬ ಅಂದಾಜು ಇದೆ.

ಜಿಎಸ್‌ಟಿಯಲ್ಲಿ ಶೇ.5, ಶೇ.12, ಶೇ.18 ಹಾಗೂ ಶೇ.28 ಎಂಬ 4 ಸ್ಲ್ಯಾಬ್‌ಗಳು ಇವೆ. ಇದೀಗ ಶೇ.12 ಹಾಗೂ ಶೇ.28 ಅನ್ನು ಕೈ ಬಿಟ್ಟು ಶೇ.5 ಹಾಗೂ ಶೇ.18ನ್ನು ಮಾತ್ರ ಉಳಿಸಿ ಕೊಳ್ಳಲಾಗುತ್ತದೆ ಎಂದು ವರದಿಗಳು ತಿಳಿಸಿವೆ. ಅದರಿಂದಾಗಿ ಶೇ.12ರ ಸ್ಲ್ಯಾಬ್‌ನಲ್ಲಿರುವ ಅನೇಕ ಉತ್ಪನ್ನಗಳು ಶೇ.5ಕ್ಕೂ ಶೇ.28ರ ಅನೇಕ ಫ್ಲ್ಯಾಬ್‌ನಲ್ಲಿರುವ ಉತ್ಪನ್ನಗಳು ಶೇ.18ಕ್ಕೂ ಸೇರಿ ತೆರಿಗೆ ಹೊರೆ ಭಾರಿ ಕಡಿಮೆಯಾಗುತ್ತದೆ, ಅದರಿಂದ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತದೆ ಎಂಬುದು ವಾದ. ತೆರಿಗೆ ಹೊರೆಯಾದರೆ ಜನರು ಉತ್ಪನ್ನ ಖರೀದಿಸಲು ಹಿಂಜರಿಯುತ್ತಾರೆ. ಅದೇ ಇಳಿಕೆಯಾದರೆ ಖರೀದಿ ಹೆಚ್ಚುತ್ತದೆ. ಇಂತಹ ಖರೀದಿಯಿಂದ ಉತ್ಪಾದನೆ ಹೆಚ್ಚುತ್ತದೆ, ಅನೇಕ ಮಂದಿಗೆ ನೌಕರಿ ಸಿಗುತ್ತದೆ, ಉದ್ದಿಮೆಗಳಿಗೆ ಹೊಸ ಉತ್ಸಾಹ ಬರುತ್ತದೆ. ಮೋದಿ ಅವರು ಇಂತಹ ಘೋಷಣೆ ಮಾಡಲು ಆಯ್ದುಕೊಂಡಿರುವ ಸಮಯವೂ ಸೂಕ್ತವಾಗಿದೆ. ಭಾರತದ ಮೇಲೆ ಅಮೇರಿಕಾ ಸುಂಕ ಬರೆ ಹೇರುತ್ತಿರುವುದರಿಂದ ದೇಶೀಯವಾಗಿಯೇ ಮಾರಾಟ ಹೆಚ್ಚಿಸಲು ಜಿಎಸ್‌ಟಿ ದರ ಇಳಿಕೆ ಅನುಕೂಲವಾಗಲಿದೆ ಎಂಬ ಅಂದಾಜು ಇದೆ. ಆತ್ಮನಿರ್ಭರ ಭಾರತಕ್ಕೆ ಜಿಎಸ್‌ಟಿ ತೆರಿಗೆ ಕಡಿತ ಮತ್ತಷ್ಟು ಕೊಡುಗೆ ನೀಡುವುದರಲ್ಲಿ ಸಂದೇಹವಿಲ್ಲ.

# ಬಿಳಿಬಟ್ಟೆಯೂ..ಪಾದರಕ್ಷೆಯೂ

**ಆ**ಗಷ್ಟೇ ಹಾಸಿಗೆಗೆ ಅಡ್ಡಾದ ಕೆರೆಕೇರಿಯ ಉಮ್ಮಣ್ಣ ಭಟ್ಟರಿಗೆ ಮಗ್ಗಲು ಬದಲಿಸುವ ಕೆಲಸನೇ ಆಗ್ಹೋಯ್ತು. ನಿದ್ದೆ ಜಪ್ಪಯ್ಯ ಎಂದರೂ ಹತ್ತಿರ ಸುಳಿಯುತ್ತಿಲ್ಲ. ಪಕ್ಕದ ಕೋಣೆಯಲ್ಲಿ ವಯಸ್ಸಾದ ತಾಯಿಯ ಕೆಮ್ಮು ಮುಲುಗುವಿಕೆ ಉಸ್ಸು.. ಉಸ್ಸು.. ಕೇಳಿ ಬರುತ್ತಲೂ ಭಟ್ಟರಿಗೆ ಎದೆಗೆ ಇಕ್ಕಳದಿಂದ ಬಗೆದಂತೆ ನೋವು ಕಾಣಿಸಿಕೊಂಡಿತು. ಹೃದಯದಲ್ಲಿ ಹೆಪ್ಪುಗಟ್ಟಿದ ನೋವು. ತಾನು ತನ್ನ ತಾಯಿಗೆ ಹೀಗೆ ನೋವು ಕೊಟ್ಟಿದ್ದೆನೆ?.

ಅದೇ ಕೇಳಿರಾ.. ಕೆರೆಭಟ್ಟರ ಮಗ ಸಮಗಾರ ಹುಡ್ಗಿ ಕೂಡಕಂಡ ಓಡಹೋದ್ನಂತೆ.

ದಾರಿಯಲ್ಲಿ ಬರುತ್ತಲೂ ಹಳ್ಳೇರ ಹೈದ ತನ್ನನ್ನು ನೋಡಿಯೇ ಕಂಡು ಕಾಣದ ಹಾಗೆ ನಾಟಕ ಮಾಡಿ ಮುದ್ದಾಂ ಆಗಿ ಹೇಳಿದಾಗ ಕಿವಿಯಲ್ಲಿ ಕಾದ ಸೀಸೆ ಹೊಯ್ದಂತೆ ಆದದ್ದು. ಈಗ ವರ್ಷ ಕಳೆದರೂ ಗುಂಯ್ ಗುಡುವ ಆ ಮಾತು ತನ್ನ ಆಯಸ್ಸನ್ನು ಹತ್ತು ವರ್ಷ ಕಡಿಮೆ ಮಾಡಿದ್ದು ಹೌದು. ತಾನೆಲ್ಲಿ ಎಡವಿದೆ? ಮಾಧವ ಸಂಸ್ಕೃತ ವೇದ ಶಾಲೆಯಲ್ಲಿ ಕಲಿತು ಹೀಗೇಕಾದ? ನಿದ್ದೆ ಬಾರದೆ ಹೊರಳಾಡತೊಡಗಿದರು.

ಯಾಕೋ ಉಮ್ಮಣ್ಣ? ನಿದ್ರೆ ಬತ್ತಿಲ್ಯಾ, ಸುಮ್ನೆ ಇಲ್ಲದ ವ್ಯಸನ ಮಾಡ್ಕತೇ ನೀನು. ನಾ ಸಾಯೋ ಮುದುಕಿ. ನಂಗೆ ನಿದ್ರೆ ಇಲ್ಲ ಅಂದ್ರೆ, ಈಗೀಗ ನಿಂಗೂ ನಿದ್ರೆನೇ ಇಲ್ದಂಗ್ ಆಯ್ತಲ್ಲೋ? ಯಾವ ಜನ್ಮದ ಕರ್ಮನೋ? ಎಂದು ತಾಯಿ ಮಲಗಿದಲ್ಲೇ ಮುಲುಗಿ ಹಳಹಳಿಸಿದರೆ, ಮರು ಮಾತಾಡದೆ ಭಟ್ಟರು ಸುಮ್ಮನೆ ಮಗ್ಗುಲ ಬದಲಿಸಿ ಮತ್ತೆ ಮಲಗಿದರು.

ಸುತ್ತಮುತ್ತ ಕಾಡಿನ ಹೊದಿಕೆ ಇದ್ದ ಊರಲ್ಲಿ ತಂಪಾದ ನೆಲೆ ಸೆಲೆ ಇದೆ. ಪ್ರಕೃತಿಯ ಮುದ್ದಿನ ಕೈಗೂಸು ಎಂಬಂತೆ ಮುಗಿಲೆತ್ತರದ ಮರಗಳು, ಹಬ್ಬಿಕೊಂಡ ಪೊದೆ ಹಿಂಡುಗಳು ಕಸಕ್ ಪಸಕ್ ಅಂತ ಅಲ್ಲಲ್ಲಿ ಸದ್ದು ಮಾಡೋ ಕಬ್ಬೆಕ್ಕು, ಮುಂಗೂಸಿ, ಮೊಲಗಳು. ಭಟ್ಟರ ಮನೆ ಹಿಂದೆ ಸಣ್ಣಕೆರೆ ಇದ್ದು ನೀರು ಬತ್ತಿದ ಸಂದರ್ಭ ಬಹು ಅಪರೂಪ. ಕೆಲವೊಮ್ಮೆ ಮೇಲಿನ ನೀರು ಇಂಗಿದರೂ ಅಂತರ್ಜಲ ಇದ್ದು ಸಣ್ಣ ಗುಂಡಿ ತೋಡಿ ಭಟ್ಟರ ಮನೆಯ ಅಡುಗೆ ಅದೇ ನೀರಿನಿಂದ. ಪ್ರಕೃತಿಗೆಂದೂ ವಿರುದ್ಧವಾಗಿ ನಡೆಯದೇ ಇದ್ದ ಸಂಸ್ಕಾರ ಇದ್ದ ಮನೆ.

ನೆನೆಯುತ್ತಾ ಭಟ್ಟರ ಕಣ್ಣಂಚು ಒದ್ದೆಯಾಯಿತು. ಎಣ್ಣೆ ಜಿಡ್ಡುಗಟ್ಟಿ ಕಮಟು ವಾಸನೆ ನಾರುತ್ತಿದ್ದ ತಲೆದಿಂಬಿಗೆ ಅವರ ಕಣ್ಣೀರು ಇಂಗಿಸಿಕೊಳ್ಳಲಾಗಲಿಲ್ಲ. ಶಾರದೆ ಇಷ್ಟು ಬೇಗ ಹೋಗಬಾರದಿತ್ತು. ಹೀಗಾಗೆ ಇದ್ದೊಬ್ಬ ಮಗ ಮನೆ ಬಿಟ್ಟು ಹೆತ್ತವರ ಬಿಟ್ಟು ಆ ಹೆಣ್ಣಿನ ಕೂಡ ಓಡಿಹೋದ. ದುಃಖ ಉಮ್ಮಳಿಸಿತು.

ಎದ್ದು ಹಚ್ಚಿಗೆ ಹುಡುಕಿದರು. ಎಲೆ ಅಡಿಕೆ ಹಾಕಿಕೊಂಡು ಬಂದರೆ ಸರಿ ಹೋಯ್ತದೆ ಎನ್ನುತ್ತಾ ಅಡಿಕೆ ಹೋಳು ಬಾಯಿಗೆ ಹೊಡೆದು



ಎಲೆ ಒರೆಸಿ ಸುಣ್ಣ ಸ್ವಲ್ಪ ಹೆಚ್ಚೆ ಬಳಿದು ಕೊಂಡು ಚೂರು ತಂಬಾಕಿನ ಪುಡಿ ಕುಟ್ಟಿ, ಎಲ್ಲವನ್ನೂ ಮಡಿಚಿ ಉಂಡೆ ಮಾಡಿ ಬಾಯಿಗಿಟ್ಟುಕೊಂಡು ಹೊರ ಜಗುಲಿಯ ಮೇಲೆ ಬಂದು ಕೂತರು. ಗವ್ವ.. ಅನ್ನೋ ಕತ್ತಲು ಹೆಬ್ಬಾವಿನ ಹಾಗೇ ಬಿದ್ದುಕೊಂಡಂತೆ ಕಾಣುತ್ತಿತ್ತು. ತಾನು ಸಣ್ಣದಿದ್ದಾಗ ಕತ್ತಲೆಗೆ ಬಹಳ ಹೆದರುತ್ತಿದ್ದ ಸಂದರ್ಭಗಳ ನೆನಸಿ ಕೊಂಡು ಮುಗುಳ್ನಕ್ಕರು. ಆ ಮೇಲೆ ಮಗ ಹುಟ್ಟಿದ ಮೇಲೆ ರಾತ್ರಿ ಊಟ ಮಾಡಿ ಹೆಚ್ಚಾದಾ ಗಲೆಲ್ಲಾ ಆತ ಬಯಲಿಗೆ ಹೋಗಬೇಕಾದಾಗಲೆಲ್ಲಾ ತಮ್ಮ ಪಂಚೆ ಹಿಡಿದೇ ಕೂರುತ್ತಿದ್ದ ದಿನಗಳು ಕಣ್ಮುಂದೆ ಬಂದವು. ಈಗ ಈ ಕತ್ತಲು ಒಳಗೋ ಹೊರಗೋ ..ಎಂಥದೋ ತಿಳಿತಿಲ್ಲ.

ನಾಳೆಯ ತಮ್ಮ ನಿತ್ಯ ಕಲಾಪಗಳು ಬಹಳೇ ಇವೆ ಎಂದು ಕೊಳ್ಳುತ್ತಾ ತಮ್ಮನ್ನು ತಾವೇ ಸಮಾಧಾನಿಸಿಕೊಳ್ಳುತ್ತ ನಿದ್ರಾದೇವಿಗಾಗಿ ಕನವರಿಸಿದರು. ನಾಳೆ ಕಾರೇಬೈಲಿಗೆ ಹೋಗಬೇಕು. ಕಾರೇಬೈಲಿನ ಮೋನಪ್ಪ ಮಾಸ್ತರ ಮನೆಯಲ್ಲಿ ಸತ್ಯ ನಾರಾಯಣ ಪೂಜೆಗೆ ಹೇಳಿದ್ದಾರೆ. ಪೌರೋಹಿತ್ಯ ಮಾಡಿಕೊಂಡಿರುವ ತನಗೆ ಅದನ್ನು ಬಿಟ್ಟರೆ ಬೇರೆ ಆದಾಯವಿಲ್ಲ. ಅಕ್ಕಪಕ್ಕ ತನ್ನ ಬಿಟ್ಟರೆ ಬೇರೆ ಪುರೋಹಿತರಿಲ್ಲ. ತನ್ನೂರು ಸರಳೇಬೈಲಿನಿಂದ ಕಾರೇಬೈಲಿಗೆ ಹೆಚ್ಚೆಂದರೆ 15 ಕಿ. ಮಿ. ಪ್ರತಿಸಲವೂ ಸೈಕಲ್ಲು ತುಳಿದೇ ಹೋಗುವುದು ರೂಢಿ. ಕಾರೇಬೈಲಿನ ಎಲ್ಲಾ ಮನೆಗಳ ಪೂಜೆ-ಪುರಸ್ಕಾರ, ಮದುವೆ-ಮುಂಜಿ, ನಾಮಕರಣ ದೇವರ ಕಾರ್ಯ ಅಂತೆಲ್ಲ ಐದಳ್ಳಿಗೆ ತಾವೇ ಹೋಗಬೇಕಾದ ಅನಿವಾರ್ಯ.

ಎಷ್ಟು ಹೊತ್ತಿಗೆ ನಿದ್ದೆ ಬಿತ್ತೋ ತಿಳಿಯದ ಹಾಗೆ ಮತ್ತೆ ಎಚ್ಚರವಾದದ್ದು ಕೋಳಿ ಕೂಗಿದಾಗಲೇ. ಬೆಳಿಗ್ಗೆ ಎದ್ದ ಕೂಡಲೇ ತಮ್ಮ ಪ್ರಾತಃ ವಿಧಿಗಳ ಮುಗಿಸಿ, ತಾಯಿಗೆ ಸ್ನಾನಕ್ಕೆ ನೀರು ಕಾಯಲಿಟ್ಟು ಬೆಳಿಗ್ಗೆಯ ತಿಂಡಿ ತಯಾರಿಸತೊಡಗಿ ದರು. ನಿನ್ನೆ ಅರೆದಿಟ್ಟ ದೋಸೆ ಹಿಟ್ಟು ಉಬ್ಬಿ ಪಾತ್ರೆಯನ್ನೆಲ್ಲಾ ವ್ಯಾಪಿಸಿ ಮುಚ್ಚಿದ್ದ ಮುಚ್ಚಳವನ್ನು ಕೆಡವಿತ್ತು. ಮನದಲ್ಲೇ ಈ ವೈಚಿತ್ರ್ಯ ನೋಡು ಎಂದು ಕೊಂಡರು. ಯಾವುದೂ ಇದ್ದ ಹಾಗೇ ಇರಲೊಲ್ಲದು. ಆದರೆ ನಾನು? ಬದಲಾವಣೆಗೆ ತೆರೆದು ಕೊಳ್ಳ ಬೇಕೆಂದರೂ ... ಮತ್ತೇ ಯೋಚಿಸಲು ಹೋಗದೇ ನಿಧಾನವಾಗಿ ಕಾವಲಿಗೆ ಎಣ್ಣೆ ಸವರಿ ಹಿಟ್ಟು ಬಿಟ್ಟು ಹದವಾಗಿ ಕೈಯಾಡಿಸಿ ಮುಚ್ಚಳ ಮುಚ್ಚಿದರು. ಮರುಕ್ಷಣ ತೆಗೆದು ತಿರುವಿ ಹಾಕಿದರು. ಬದುಕಿನ ಹಾಳೆಯಂತೆ ಅದು ಕ್ಷಣಕ್ಷಣ ಬಣ್ಣ ಬದಲಾಯಿಸುತ್ತ ಬಿಳಿಯ ಹಿಟ್ಟು ಕೆಂಪಗೆ ಹದವಾದ ದೋಸೆಯಾಗುತ್ತಲೇ ತೆಗೆದು ಇನ್ನೊಂದು ಸುರಿದರು. ವಿಚಿತ್ರದ ಸಂದೇಶ ಕೊಡುವಂತೆ ದೋಸೆ ಅವರ ಮನಸ್ಸನ್ನೆಲ್ಲಾ ಆಕ್ರಮಿಸಿತು.

ಅರೇ! ಹೀಗೆ ವಿಚಾರ ಮಾಡುತ್ತಾ ನಿಂತರೆ ನನ್ನ ಕೆಲಸದ ಗತಿ! ಎನ್ನುತ್ತ ಬೇಗ ಬೇಗ ತಾಯಿಗೆ ಎಬ್ಬಿಸಿ ಅವರ ಸ್ನಾನ ಮುಗಿದು ಬರುತ್ತಲೂ ಒಟ್ಟಿಗೆ ಚಹ ತಯಾರಿಸಿಟ್ಟು ಕಾಯತೊಡಗಿದರು. ಆಕೆ ಬರುತ್ತಲೂ ತಾಯಿಗೆ ಚಾ ಕೊಟ್ಟು ತಾನೂ ತಿಂದು ಬರಬರ ಎಲ್ಲಾ ಎತ್ತಿಟ್ಟು ಕೈಕಾಲು ತೊಳೆದು ಈಗ ಎದ್ದೇ ಬಿಟ್ಟರು. ಬಿಳಿಬಣ್ಣದ ಧೋತಿ ಮೇಲಂಗಿ ಧರಿಸಿ ಸೈಕಲ್ಲು ತುಳಿಯುತ್ತಾ ಡಾಂಬರು ರಸ್ತೆ ದಾಟಿ ಅಡ್ಡದಾರಿಯಲ್ಲಿ ಹೊರಳಿದರೆ ಅದು ಕಚ್ಚಾ ರಸ್ತೆ. ಮಣ್ಣಿನ ದಾರಿಗುಂಟ ಹಚ್ಚಹಸಿರು ಮನಸ್ಸನ್ನು ಮುದಗೊಳಿಸುತ್ತಾ, ಮನಸ್ಸಿನ ನಿನ್ನೆಯ ದುಗುಡವನ್ನು ಕೊಂಚ ಮರೆಸಿತ್ತು. ಇನ್ನೇನೂ ಮುಟ್ಟಿದೆ.. ಎನ್ನುವಾಗಲೇ ತಿರುವಿ ನಲ್ಲಿ ಆ ಮನೆ. ವಿಷ್ಣು ಹೆಬ್ಬಾರರ ಮನೆ. ಹವ್ಯಕರೇ ಆದರೂ ತೋಟ ಗದ್ದೆ ಮಾಡಿ ಕೊಂಡಿದ್ದ ಜನ ಅವರು. ಪೌರೋಹಿತ್ಯ ಮಾಡು ತ್ತಿರಲಿಲ್ಲ. ಸ್ವಲ್ಪ ಆಧುನಿಕ ಸಂಪ್ರದಾಯಸ್ಥರೆಂದು ಹೆಸರಾಗಿದ್ದರು. ವಿಷ್ಣು ಹೆಬ್ಬಾರರು ಕಾಲವಾಗಿ ಹತ್ತಾರು ವರ್ಷಗಳಾಗಿತ್ತು. ಅವರ ಮಗ ಸುಬ್ರಾಯ ಮೊನ್ನೆ ಮೊನ್ನೆ ಮಗನ ಮದುವೆ ಮಾಡಿದ್ದರು. ತನ್ನನ್ನೇ ಕರೆದಿದ್ದರೂ ಆ ಸಂದರ್ಭದಲ್ಲಿ ತೀವ್ರ ಅನಾರೋಗ್ಯದ ಕಾರಣ ತನಗೆ ಹೋಗಲಾಗಿರಲಿಲ್ಲ, ಹೆಣ್ಣು ಕೂಡಾ ಅನ್ಯ ಜಾತಿಯದ್ದೆಂದು ಸುದ್ದಿ ಇತ್ತು. ರಸ್ತೆಯಿಂದ ಕೊಂಚ ತಗ್ಗಿಗೆ ಇರುವ ಮನೆ. ಜಗುಲಿ ಮೇಲೆ ಕೂತು ವಿಷ್ಣು ಹೆಬ್ಬಾರರ ಮಗ ಸುಬ್ರಾಯ ಹೆಬ್ಬಾರರು ಏನೋ ಹೊಸೆಯುತ್ತಿದ್ದ ಹಾಗೆ ಕಾಣಿಸಿತು. ನಿಲ್ಲಿಸಿ ಮಾತನಾಡಿಸಿಕೊಂಡು ಹೋಗುವ ಎಂದರೂ ಪೂಜೆಗೆ ವಿಳಂಬವಾದರೆ ಎಂದು ಬರುವಾಗ ಹೋದರಾಯಿತೆಂದು ಕೊಂಡರು. ಆದರೆ ಮನ ಸ್ಯಾಕೋ ತಡೆಲಿಲ್ಲ, ಸೈಕಲ್ಲು ನಿಲ್ಲಿಸಿ ಕೆಳಗಿಳಿದು ಮನೆ ಕಡೆ ಹೆಜ್ಜೆ ಹಾಕಿದರು. ಹೊಸ್ತಿಲಿಗೆ ನೂರು ಗಜ ಇರುವಾಗಲೇ ಪಡಸಾಲೆಯಿಂದ ಪ್ರಾಯದ ತರುಣಿಯೊಬ್ಬಳು ಹೊರಬಂದಳು. ಬ್ರಾಹ್ಮಣ ಹೆಣ್ಣು ಅನ್ನಿಸಲಿಲ್ಲ. ಗೋದಿಬಣ್ಣದ ಮುಖದಲ್ಲೊಂದು ವಿಚಿತ್ರ ಸೆಳೆತವಿದೆ. ಒಂದು ಕೈಯಲ್ಲಿ ನೀರು ತುಂಬಿದ ಚರಿಗೆ ಇನ್ನೊಂದರಲ್ಲಿ ಕುಂಕುಮದ ಭರಣಿ ಹಿಡಿದ ಅವಳು ಮನೆ ಮುಂದಿನ ತುಳಸಿಕಟ್ಟೆ ತೊಳೆಯತೊಡಗಿದಳು. ಭಟ್ಟರು ಅವಳನ್ನೇ ನೋಡುತ್ತಾ ಜಗುಲಿಗೆ ಬರುತ್ತಲೂ ಆ ತನಕವೂ ತಗ್ಗಿದ ತಲೆಯಲ್ಲಿ ತೆಂಗಿನ ಕತ್ತ ಹೊಸೆಯುತ್ತಿದ್ದ ಹೆಬ್ಬಾರರು ಒಮ್ಮೆಲೆ ನೋಡಿ ಅರೆರೆ ಇದೆಂಥಹ ಮಾರಾಯ್, ಬಂದಿದ್ದೆ ತಿಳಿತಿಲ್ಯೇ.. ಎಷ್ಟೊತ್ತಿಗೇ ಬಂದ್ಯಾ? ಬಾ.. ಕುಳ್ಳು.. ಆಸರಿಕೆ ಕುಡ್ದು ಮಾತಾಡಿದ್ರಾಯ್ತು ಎಂದು ಉಪಚರಿಸಿದರು. ಬೆಳ್ಳಂಬೆಳಿಗ್ಗೆ ಬಂದ ಅವರನ್ನು ನೋಡಿ ಅವರಿಗೆ ಆಶ್ಚರ್ಯ. ಅಡುಗೆ ಕೋಣೆಯಲ್ಲಿದ್ದ ಹೆಂಡತಿಗೆ ಕೂಗಿ ಹೇಳಿದರು.

ಗುಲಾಬಿ, ಎರಡು ಲೋಟ ಚಾ ಮಾಡ್ಕಂಬಾ.. ಹಾಂಗೇ ದೋಸೆನೂ ತಾ. ಸರಳೆ ಬೈಲಿಂದ ಉಮ್ಮಣ್ಣ ಬಂದಾನೇ ಎನ್ನುತ್ತಲೇ ಒಳಬಾಗಿಲ ತುದಿಯಿಂದ ಆಕೆ ಹೊರಬಂದು ಮಾತಾಡಿಸಿ ದಳು. ಬಾಳದಿನಾ ಆಗ್ಹೋಯ್ತು ಕಾಣ್ದೆ. ಇತ್ಲಾಗೇ ಬರ್ಲೇ ಇಲ್ಲ ಕಾಣ್ತು ಸದ್ಯ. ಎಂದು ಹೇಳಿ ಗಂಗವ್ವನ ಆರೋಗ್ಯ ವಿಚಾರಿಸಿ ಒಳನಡೆದಳು. ಅಷ್ಟೇ ಹೊತ್ತಿಗೆ ತುಳಸಿ ಪೂಜೆ ಮುಗಿಸಿ ಬಂದ ಸೊಸೆ ಕಳೆಕಳೆಯಾಗಿ ಕಾಣುತ್ತಲೇ ಹೆಬ್ಬಾರರು ಮಾಣಿ ಎದ್ನಾ ಇನ್ನೂ ಮಲಗೇ ಇದ್ನಾ ಎಂದು ಆಕೆಗೆ ವಿಚಾರಿಸಿದರು.


ಈಗ ಎಬ್ಬಿಸಿ ಬರ್ತಿನ್ರೀ.. ಎನ್ನುತ್ತಾ ಆಕೆ ನಗುತ್ತಾ ಒಳ ಕೋಣೆ ಒಳಹೊಕ್ಕಳು. ಹೆಬ್ಬಾರರ ಮುಖದಲ್ಲಿ ಸಣ್ಣಗೆ ಮುಗುಳುನಗು ಮನೆ ಮಾಡಿದ್ದನ್ನು ಗ್ರಹಿಸಿದ ಭಟ್ಟರು ಕೂಡಾ ಅದರ ಒಳಾರ್ಥ ತಿಳಿದು ತಾವು ನಕ್ಕರು. ಹೊಸ ಜೋಡಿ, ಅದ್ಕೆಯಾ ನಾನು ಅಂವಗೆ ಎಬ್ಬಿಸಿಲ್ಲೇ. ರಾತ್ರಿಯೆಲ್ಲ ಜಾಗರಣೆ ಮಾಡ್ತು ಎನ್ನುತ್ತಾ ಇನ್ನೊಮ್ಮೆ ನಕ್ಕರು. ಸೊಸೆ ಕಲಿತವಳೆಂದು ಹೇಳಿದರು. ಡಿಪ್ಲೋಮೊ ಮುಗಿಸಿದ ಮಗ ನೌಕರಿಯ ಹುಚ್ಚು ಹಿಡಿಸಿಕೊಳ್ಳದೇ ಹೊಲಗದ್ದೆ ನೋಡಿಕೊಂಡು ಊರಲ್ಲೇ ಇದ್ದ. ಈಗ ಹೆಣ್ಣು ಹುಡುಗಿಯರು ಜಾತಿಯಲ್ಲಿ ಸಿಗುವುದೇ ಅಪರೂಪ. ಅದರಲ್ಲೂ ಮನೆಯಲ್ಲಿದ್ದ ಗಂಡನ್ನು ಮದುವೆಯಾಗಲು ಕಲಿತ ಹೆಣ್ಣುಗಳು ಮನಸ್ಸು ಮಾಡುವುದಿಲ್ಲ, ಇವೆಲ್ಲ ವಿಚಾರಗಳು ಭಟ್ರ ಮನದಲ್ಲಿ ಹಾದುಹೋಗುತ್ತಾ ಇರುವಾಗಲೇ ಹೆಬ್ಬಾರರ ಮಾತು ಕೇಳಿತು.ಮತ್ತೆ ಮನೆ ಕಡೆ ಎಲ್ಲಾ ಹುಷಾರ ಕಾಣ್ತು. ಮಾಣಿ ಮದುವೆ ಮಾಡ್ಕಂಡ ಸುದ್ದಿ ಕೇಳ್ದೆ. ಭಟ್ರು ಮಾತಾಡಲಿಲ್ಲ, ಹೆಬ್ಬಾರರೇ ಮುಂದುವರೆಸಿದರು. ಮಂಜುಳಾ, ಇಕಾ ಮಗಾ ಈ ವಾಟೆ, ತಟ್ಟೆ ಎತ್ತಿಡಾ ಎಂದು ಆಪ್ತತೆಯಿಂದ ಕರೆದು ಹೇಳಿದರು. ಆ ಮುದ್ದಾದ ಹುಡುಗಿ ಅವುಗಳನ್ನೆಲ್ಲಾ ಎತ್ತಿಕೊಂಡು ಹೋಗುವವರೆಗೂ ಸುಮ್ಮನಿದ್ದ ಭಟ್ರು, ಸುಬ್ರಾಯ್ ಯಾವ ಕಡೆ ಹೆಣ್ಣು? ಮಾತು ಗೊತ್ತಿಲ್ಲದೇ ಬಂದಿತ್ತು. ಯ್ಯಾವ ಕಡೆದಾದ್ರೇನು? ಹೆಣ್ಣು ಚೆಂದ. ಮನೆ ಸಂಭಾಳಿಸೋ ತಾಕತ್ತಿದ್ದು, ಸಾಕು ಈಗೆಲ್ಲ ಅದೆಲ್ಲ ನೋಡ್ತ ಕೂಂತ್ರೆ, ಸಂತಾನ ಮುಂದುವರಿತಿಲ್ಲೇ. ಮಗ ಸೊಸೆ ಹಚ್ಚಂಡಿದ್ದು. ಗಂಡ ಜಾತಿ ಹೆಣ್ಣು ಜಾತಿ ಅಷ್ಟೇಯಾ? ಎಂದು ಅದನ್ನು ಮುಂದುವರೆಸುವ ಇಚ್ಚೆ ಇಲ್ಲದವರಂತೆ ಸೊಸೆ ಹೋದತ್ತಲೇ ಅಭಿಮಾನದ ನೋಟ ಬೀರಿದರು. ಭಟ್ಟರಿಗೆ ಅಲ್ಲಿ ಹೆಚ್ಚು ಹೊತ್ತು ಕುಳಿತುಕೊಳ್ಳಲಾಗಲೇ ಇಲ್ಲ. ಇದೆಲ್ಲಾ ಹೇಗೆ ಏನು ಎತ್ತ ಸರಿಯೋ ತಪ್ಪೋ? ಒಂದರಡೆನ್ನದೇ ಹಲವು ಹುಳಗಳು ತಲೆ ಕೊರೆಯಲಾರಂಭಿಸಿದವು.

ಸುಬ್ರಾಯಾ ನಾ ಬತ್ನೋ.. ಮತ್ತೊಂದಿನ ಬತ್ತೆ ಭಟ್ರು ಪಂಚೆ ಹೆಗಲಿಗೇರಿಸಿ ನಿಂತರು. ಮನೆ ಅಂಗಳದವವರೆಗೆ ಸುಬ್ರಾಯ ಹೆಬ್ಬಾರರು ಬಂದರೂ ಇಬ್ಬರೂ ಮಾತನಾಡಲಿಲ್ಲ. ಹೆಬ್ಬಾರರು ಕೈಸನ್ನೆಯಲ್ಲೇ ಸೈಕಲ್ಲ ಏರಿದ ಭಟ್ಟರಿಗೆ ವಿದಾಯ ಹೇಳಿದರು.ಭಟ್ಟರ ಸೈಕಲ್ಲು ಮೋನಪ್ಪ ಮಾಸ್ತರ ಮನೆ ಕಡೆ ಹೊರಟಿತು. ಪೂಜೆಗೆಲ್ಲ ತಯಾರಿ ಮಾಡಿಕೊಂಡಿದ್ದ ಮಾಸ್ತರರು ಭಟ್ಟರನ್ನು ಕಂಡ ಕೂಡಲೇ ನಮಸ್ಕರಿಸಿ, ಎಳೆನೀರೊಂದನ್ನು ಕುಡಿಯಲು ಕೊಟ್ಟು ಕುಶಲೋಪರಿ ವಿಚಾರಿಸು ತ್ತಿದ್ದರು. ಅತ್ತ ಕಡೆ ಗಮನವೇ ಇಲ್ಲದೇ ಅದೇನೋ ಉತ್ತರಿಸುತ್ತಿದ್ದ ಭಟ್ಟರಿಗೆ ಮನದ ತುಂಬಾ ಹೆಬ್ಬಾರರ ಸೊಸೆ ಮತ್ತು ತಮ್ಮ ಸೊಸೆಯ ಚಿತ್ರಗಳೇ ಕಾಣತೊಡಗಿದವು. ಹಾಗೂ ಹೀಗೂ ಪೂಜೆ ಸಾಂಗವಾಗಿ ಮುಗಿಸಿಕೊಟ್ಟರೂ ಮಾಸ್ತರರಿಗೆ ಇಂದು ಭಟ್ಟರ ಇಲ್ಲದ ಆತುರ ಕಂಡು ಆಶ್ಚರ್ಯ ಜೊತೆಗೆ ಕಸಿವಿಸಿ. ಮೋನಪ್ಪ ಮಾಸ್ತರ ಕೊಟ್ಟ ಪೂಜಾ ದೇಣಿಗೆ ಪಡೆದು ಚೀಲ ಸೈಕಲ್ಲಿಗೆ ಏರಿಸಿ ಹೊರಟೇ ಬಿಟ್ಟರು. ಪ್ರತಿ ಸಲವೂ ಬಂದಾಗ ಒಂದಿಷ್ಟು ಹರಟೆಹೊಡೆದು ಹೋಗುತ್ತಿದ್ದ ಭಟ್ಟರ ಇಂದಿನ ಮನಸ್ಥಿತಿ ಮಾಸ್ತರರಿಗೆ ಅರ್ಥವಾಗಲಿಲ್ಲ.

ಭಟ್ಟರು ಪೆಡಲ್ ತುಳಿದೇ ತುಳಿದರು. ಶಾಸ್ತ್ರಾಧ್ಯಯನ ಮಾಡದ ಸುಬ್ರಾಯ ಎಷ್ಟು ಮಾರ್ಮಿಕವಾಗಿ ಮಾತಾಡಿದ? ಮುಟ್ಟಿಸಿಕೊಳ್ಳುವುದೆಂದರೆ ಮನಸ್ಸನ್ನೋ ದೇಹವನ್ನೋ?. ಕೊಡಸಣಿಯಲ್ಲಿ ಮಗ ಮನೆ ಮಾಡಿದಂದಿನಿಂದ ತಾನು ಅಲ್ಲಿಗೆ ಕಾಲಿಡುತ್ತಿಲ್ಲ, ಯಾರು ಬಂದು ಕರೆದರೂ ಕೊಡಸಣಿಯಲ್ಲಿಯ ಯಾವ ದೇವತಾಕಾರ್ಯದ ಕೆಲಸಕ್ಕೂ ಹೋಗುತ್ತಿಲ್ಲ, ಯೋಚಿಸುತ್ತ ಸೈಕಲ್ಲು ತುಳಿಯುತ್ತಲೇ ಇದ್ದರು ಯಾವುದೋ ಮಾಯೆಗೆ ಒಳಗಾದಂತೆ.

ಒಮ್ಮೆಲೆ ಎಡಗಾಲಲ್ಲಿಯ ಚಪ್ಪಲಿಯ ಅಂಗುಟ ಸೈಕಲ್ಲಿನ ಪೆಡಲ್‌ಗೆ ಸಿಕ್ಕು ಕಿತ್ತು ಬಂತು. ಸೈಕಲ್ಲು ನಿಲ್ಲಿಸಿ ಚಪ್ಪಲಿಯ ಕೈಯಲ್ಲಿ ಹಿಡಿದು ಕಿತ್ತ ತೂಬಿನಲ್ಲಿ ತೂರಿ ಸರಿಮಾಡಿಕೊಂಡರು. ಸೃಷ್ಟಿ ಪ್ರಕ್ರಿಯೆಯ ವಿಭಿನ್ನ ಆಯಾಮ ಗ್ರಹಿಸಿದಂತೆ ಎಲ್ಲವೂ ಮನದ ಮಾಯೆಯಲ್ಲದೇ ಬೇರೆನೂ ಅಲ್ಲ!! ಎನ್ನಿಸಿಬಿಟ್ಟತು. ಆ ಪ್ರಜ್ಞೆಗೆ ಒಮ್ಮೆಲೇ ಅವಕ್ಕಾದರು. ಅರೆರೇ!! ಇದ್ಯಾವ ದಾರಿಯಲ್ಲಿ ಬಂದೆ? ಎನ್ನುವಷ್ಟರಲ್ಲೇ ಸೈಕಲ್ಲು ಕೊಡಸಣಿಗೇ ಬಂದು ತಲುಪಿತ್ತು. ಸಣ್ಣ ಭಾಗಾಯತದ ಮನೆಯೊಂದರ ಮುಂದೆ ಭಟ್ಟರು ಸೈಕಲ್ಲು ಇಳಿದಿದ್ದರು.

# ಜಿರಳೆ



**ಈ** ಪ್ರಶ್ನೆಯನ್ನು ಇವತ್ತು ನಮ್ಮ ಮನೆಯಲ್ಲಿ ಓಡಾಡುತ್ತಿದ್ದ ಒಂದೇ ಒಂದು ಜಿರಳೆ ನನ್ನ ಮುಂದೆ ಬಂದು ಕೇಳಿಬಿಡ್ತು. ನನಗೆ ಅದಕ್ಕೆ ಉತ್ತರ ಕೊಡುವಷ್ಟು ವ್ಯವಧಾನವೂ ಇರಲಿಲ್ಲ ಹಾಗಾಗಿ ಅದರ ಪ್ರಶ್ನೆಯನ್ನು ನಿಮ್ಮ ಮುಂದೆ ಇಟ್ಟಿದ್ದೇನೆ, ಅಲ್ಲ ಸರ್ ನಾವು ನಿಮಗೇನು ತೊಂದರೆ ಮಾಡಿದ್ದೇವೆ, ಮನೆಯ ಯಾವುದೋ ಒಂದು ಮೂಲೆಯಲ್ಲಿ ಬದುಕಿ ಬಿಡುತ್ತೇವೆ. ನಮ್ಮನ್ನು ಸಾಯಿಸುವುದಕ್ಕಿಂತಲೇ ಏನೇನು ಉಪಕರಣಗಳನ್ನು ಬಳಸ್ತೀರಿ ಅದನ್ನು ಜಾಹೀರಾತು ಬೇರೆ ಕೊಡುತ್ತೀರಿ ನಮ್ಮನ್ನು ಸಾಯಿಸುವುದೇ ಅದ್ಭುತವಾದ ಸಾಧನೆ ಅಂದುಕೊಂಡಿದ್ದೀರಿ. ಮತ್ತೆ ನೀವು ಪ್ರಾಣಿದಯೆ ಇದ್ದವರು ಯಾರಿಗೂ ನೋವನ್ನ ಮಾಡದವರು ಅಂತಹ ಭಾಷಣವು ಮಾಡುತ್ತೀರಿ. ನಮ್ಮನ್ನು ಸಾಯಿಸೋದು ನಿಮ್ಮ ಪ್ರಕಾರ ಸರಿ. ನಿಮ್ಮ ಮನೆಯ ಮುಂದೆ ಓಡಾಡುವ ಚಿಟ್ಟೆಯನ್ನು ನೋಯಿಸಿದರೂ, ನಾಯಿಗೆ ತೊಂದರೆ ಮಾಡಿದರು ಅದು ತಪ್ಪು. ಅದಕ್ಕೆಂದಲೇ ತಪ್ಪನ್ನು ತಿದ್ದಿ ಹೇಳುವುದಕ್ಕೆ ಒಂದಷ್ಟು ಜನ ಇರ್ತಾರೆ. ನಮ್ಮ ಸಾವಿನ ಬಗ್ಗೆ ನಿಮಗೆ ಯಾರಿಗೂ ಯೋಚನೆ ಇಲ್ಲ. ನಾವು ಈ ಭೂಮಿಯಲ್ಲಿ ಬದುಕಿದ್ದೇವೆ ಅಂದಮೇಲೆ ಬದುಕುವ ಅವಕಾಶ ನಮಗೂ ಇದೆ. ಹೀಗೆ ನಮ್ಮನ್ನ ಸಾಯಿಸ್ತಾ ಹೋದ್ರೆ ಮುಂದೊಂದು ದಿನ ನಿಮಗೂ ಅದರ ತೊಂದರೆ ಅರಿವಾಗಬಹುದು. ನನ್ನ ಪ್ರಶ್ನೆಗೆ ಉತ್ತರ ಕೊಡಿ ನಾವೇನು ತಪ್ಪುಮಾಡಿದ್ದೇವೆ?

-ಧೀರಜ್ ಬೆಳ್ಳಾರೆ

